ಅಲ್ಲೂರಿ ಸೀತಾರಾಮರಾಜು

ಡಾ: ಜಿ.ಎಸ್.ಮೋಹನ್

ಕರ್ನಾಟಕ ಸಾಹಿತ್ಯ ಅಕಾಡೆಮಿ

ಸಾಮಾಜಿಕ ಚಿಂತನಮಾಲೆ

ಅಲ್ಲೂರಿ ಸೀತಾರಾಮರಾಜು

ಜಯಶ್ರೀ ಟ್ರಸ್ಟ್
ಸರಸ್ವತಿ ನಿಲಯ
ಕ್ರಮಸಂಖ್ಯೆ..........
ವಿಭಾಗ.......... ಸಂಖ್ಯೆ..........

ಡಾ. ಜಿ. ಎಸ್. ಮೋಹನ್

ಶ್ರೀನಿವಾಸಯ್ಯನವರ ಗ್ರಂಥ ಭಂಡಾರ
ACC. No.: 0C5445
No.:
DATE:
ಗಾಂಧೀ ಭವನ ಬೆಂಗಳೂರು - 1

ಕರ್ನಾಟಕ ಸಾಹಿತ್ಯ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು ೫೬೦೦೦೨

ALLURI SITHARAMARAJU
—Written by Dr. G. S. Mohan
and Published by Karnataka Sahitya Akademy,
Nrupatunga Road, Bangalore-560002.

First Publication 1994 Pages : viii+36

ಹಕ್ಕುಗಳು : ಲೇಖಕರವು

ಮೊದಲನೇ ಮುದ್ರಣ ೧೯೯೪

ಪ್ರಧಾನ ಸಂಪಾದಕರು :

ಬರಗೂರು ರಾಮಚಂದ್ರಪ್ಪ
ಅಧ್ಯಕ್ಷರು
ಕರ್ನಾಟಕ ಸಾಹಿತ್ಯ ಅಕಾಡೆಮಿ

ಪ್ರಕಾಶಕರು :

ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ರಕ್ಷಾಪುಟ ವಿನ್ಯಾಸ :

ಸಿ. ಚಂದ್ರಶೇಖರ್

ಬೆಲೆ : ಎರಡು ರೂಪಾಯಿ

ಮುದ್ರಕರು :

ರಶ್ಮಿ ಮುದ್ರಣ
ನಂ. ೧೯, ೫ನೇ ಕ್ರಾಸ್, ಸುಧಾಮನಗರ, ಬೆಂಗಳೂರು-೫೬೦೦೨೭

ಅಧ್ಯಕ್ಷರ ಮಾತು

ಸಮಾಜದಲ್ಲಿ ಸಮಾನತೆ, ಸಾಮರಸ್ಯಗಳು ನೆಲೆಯೂರಬೇಕೆಂಬ ಆಶಯಕ್ಕೆ ಒಂದು ಇತಿಹಾಸವಿದೆ. ವಿವಿಧ ಕಾಲಘಟ್ಟಗಳಲ್ಲಿ ಬದುಕನ್ನು ಅಂತಃಕರಣಪೂರ್ವಕವಾಗಿ ಪ್ರೀತಿಸಿದ ಚೇತನಗಳು, ಆರೋಗ್ಯಕರ ಚಲನಶೀಲತೆಗೆ ಒತ್ತಾಸೆಯಾಗಿವೆ. ಇದು ಹೊಸ ಬೆಳಕನ್ನು ಹುಡುಕುವ ಒಂದು ಹೋರಾಟ ; ಅಂತೆಯೇ ಇರುವ ಬೆಳಕನ್ನು ಕಾಯ್ದುಕೊಳ್ಳುವ ವಿಶಿಷ್ಟ ಕಾಳಜಿ. ಅದೇ ಸಂದರ್ಭದಲ್ಲಿ ಹಗಲಲ್ಲೇ ಕತ್ತಲು ಮೂಡಿಸುವ ಕರಾಳ ಪ್ರಯತ್ನಗಳಿಗೇನೂ ಕಡಿಮೆಯಿಲ್ಲ. ಬೆಳಕಿನ ಕಿರಣಗಳನ್ನು ಕತ್ತಲ ಕೋಣೆಯಲ್ಲಿ ಕೂಡಿ ಹಾಕುವ ಇಂಥ ಸ್ವಾರ್ಥ ಶಕ್ತಿಗಳಿಗೂ, ಚಲನಶೀಲಪರವಾದ ಚೇತನಗಳಿಗೂ ಮುಖಾಮುಖಿ ಅನಿವಾರ್ಯ. ವ್ಯಕ್ತಿ ಮತ್ತು ಸಂದರ್ಭಗಳಿಗನುಗುಣವಾಗಿ ಮುಖಾಮುಖಿಯ ಸ್ವರೂಪದಲ್ಲಿ ವ್ಯತ್ಯಾಸಗಳಿರಬಹುದು ; ಕಾರ್ಯಕ್ಷೇತ್ರಗಳಲ್ಲಿ ವಿಭಿನ್ನತೆಯಿರಬಹುದು. ಆದರೆ ಆಯಾ ನೆಲೆಯಲ್ಲಿ ಜಡತೆಯನ್ನು ಮೀರುವ ಮನೋಧರ್ಮ ಮುಖ್ಯವಾಗುವ ಮುಖಾಮುಖಿಯು ಮಹತ್ವದ್ದೇ ಆಗಿರುತ್ತದೆ.

ಸಾಮಾಜಿಕ ಸನ್ನಿವೇಶವೊಂದು ಉಂಟುಮಾಡುವ ಸೈದ್ಧಾಂತಿಕ ಮುಖಾಮುಖಿ ಮತ್ತು ಅದರ ಫಲಿತಗಳು ಇದ್ದಕ್ಕಿದ್ದಂತೆ ಸಂಭವಿಸುವುದಿಲ್ಲ. ಇದಕ್ಕೂ ಒಂದು ಚರಿತ್ರೆಯಿರುತ್ತದೆ. ಆದ್ದರಿಂದ ಚಾರಿತ್ರಿಕತೆಯನ್ನು ಪರಿಗಣಿಸಿಯೇ ನಾವು ಸಾಮಾಜಿಕ ಚಿಂತನೆಯನ್ನು ಪರಿಶೀಲಿಸುವುದು ಆರೋಗ್ಯಕರವಾದುದು. ನಿರ್ದಿಷ್ಟ ಕಾಲದ ಚಲನಶೀಲ ಚಿಂತನೆ ಸಮಕಾಲೀನ ಸಂದರ್ಭದಲ್ಲಿ ಹಳೆಯದಾಗಬಹುದಾದರೂ,

ಸಮಕಾಲೀನ ಸಂದರ್ಭದ ಹೊಸ ಚಿಂತನೆಗಳಿಗೆ ಚಾರಿತ್ರಿಕ ಒತ್ತಾಸೆಯನ್ನೂ, ಪ್ರಗತಿಪರ ಪರಂಪರೆಯನ್ನೂ ಅದು ಒದಗಿಸಿರುತ್ತದೆ ಯೆಂಬುದನ್ನು ನಾವು ಮರೆಯಲಾಗದು. ಆಯಾ ಚಾರಿತ್ರಿಕ ಸಂದರ್ಭವನ್ನು ಪರಿಗಣಿಸಿಯೇ ಸಮಕಾಲೀನ ವಿವೇಕದ ಮೂಲಕ ಎಲ್ಲ ಕಾಲದ ಚಿಂತನೆಗಳನ್ನು ತೂಗಿ ನೋಡುವುದರಿಂದ ಆತುರದ, ಅತಿರೇಕದ ತೀರ್ಪುಗಳಿಂದ ನಾವು ಪಾರಾಗುತ್ತೇವೆ. ಸರಿದಾರಿಯಲ್ಲಿ ಹೆಜ್ಜೆಯಿಡುತ್ತೇವೆ. ಆಯಾ ಕಾಲದ ಸಾಮಾಜಿಕ ಚಿಂತನೆಗಳ ಚಲನಶೀಲತೆಯನ್ನು ಮೆಚ್ಚುತ್ತ, ಮಿತಿಗಳನ್ನು ಗುರುತಿಸಿ ಮೀರುತ್ತಾ, ಹೊಸ ಮನೋಧರ್ಮವನ್ನು ರೂಪಿಸಿಕೊಳ್ಳುವುದು, ಚಿಂತನೆಗೆ ಹೊಸ ಆಯಾಮಗಳನ್ನು ಕಂಡುಕೊಳ್ಳುವುದು ಸಮಕಾಲೀನತೆಯ ಸತ್ವವಾಗಬಲ್ಲದು.

ಒಟ್ಟು ವಿಶ್ವದಲ್ಲಿ ಭಕ್ತರು, ಸಂತರು, ಸಮಾಜ ಸೇವಕರು, ರಾಜಕಾರಣಿಗಳು, ವಿಜ್ಞಾನಿಗಳು, ಕವಿ–ಕಲಾವಿದರು, ಕ್ರಾಂತಿಕಾರಿಗಳು –ಹೀಗೆ ವಿವಿಧ ನೆಲೆಗಳಲ್ಲಿ ಬದುಕನ್ನು ಕಂಡುಕೊಳ್ಳುವ ಮತ್ತು ಕಟ್ಟುವ ಕ್ರಿಯಾಶೀಲತೆ ತೋರಿದವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಸಾಮಾಜಿಕ ಚಿಂತಕರೇ ಆಗಿದ್ದಾರೆ. ಇವರ ನಂಬಿಕೆ, ನಿಲುವು ಮತ್ತು ಮಾರ್ಗಗಳು ಬೇರೆ ಬೇರೆಯಿರಬಹುದು. ಆದರೆ ತಂತಮ್ಮ ಕಾರ್ಯಕ್ಷೇತ್ರದ ಚೌಕಟ್ಟಿನಲ್ಲಿ ಯಥಾಸ್ಥಿತಿಯನ್ನು ಮೀರುತ್ತ, ಮುಂದೆ ಜಡ ಚೌಕಟ್ಟುಗಳನ್ನು ಛಿದ್ರಮಾಡಿ ಹೊಸ ಹಾದಿ ಹುಡುಕುವುದಕ್ಕೆ, ಹೊಸ ಚಿತ್ರ ಬರೆದು ಹೊಸ ಚೌಕಟ್ಟು ನಿರ್ಮಿಸುವುದಕ್ಕೆ ಪ್ರೇರಣೆಯಾಗಿರುವುದಂತೂ ನಿಜ. ಪರಸ್ಪರ ವಿರುದ್ಧ ನೆಲೆಗಳಿಗೆ ಸೇರಿದ ಇವರು ತಮ್ಮೆಲ್ಲ ಮಿತಿ ಮತ್ತು ವ್ಯಾಪ್ತಿಯೊಂದಿಗೆ ಚಾರಿತ್ರಿಕ ಮಹತ್ವ ಪಡೆಯುತ್ತಾರೆ. ಯಾಕೆಂದರೆ ಸಾಮಾಜಿಕ ಚಿಂತಕರು ಯಾವುದೇ ಕ್ಷೇತ್ರಕ್ಕೆ ಸಂಬಂಧಿಸಿರಲಿ, ಯಾವುದೇ ಸೈದ್ಧಾಂತಿಕ ಸ್ವರೂಪವನ್ನು ಹೊಂದಿರಲಿ, ಅವರವರ ಸಂದರ್ಭದಲ್ಲಿ ಮೂಲಭೂತವಾದಿ ಮನೋಧರ್ಮವನ್ನು ಪಡೆದಿರುವುದಿಲ್ಲ; ಜಡಚೈಲುಗಳನ್ನು ನಿರ್ಮಿಸುವುದಿಲ್ಲ; ಅಸಮಾನತೆಯನ್ನು

ಒಪ್ಪುವುದಿಲ್ಲ; ಅವಹಾನವೀಯತೆಯನ್ನು ಘೋಷಿಸುವುದಿಲ್ಲ. ಆದರ ಆದ್ಯತೆಗಳಲ್ಲಿ ಅಂತರವಿರಬಹುದು; ಚಿಂತನೆಯಲ್ಲಿ ವೈರಂಧ್ಯಗಳಿರ ಬಹುದು. ಒಟ್ಟಾರೆ ಒಂದಷ್ಟು ಮರುಚಿಂತನೆಗೆ ಒತ್ತಾಸೆಯಾಗಿ ತಾವು ಬದುಕಿದ ಪರಿಸರಕ್ಕೆ ಮಾನವೀಯ ಮಿಡಿತ ತರುವ ಪ್ರಾಮಾಣಿಕ ಪ್ರಯತ್ನದಲ್ಲಿ ತೊಡಗಿರುತ್ತಾರೆ.

ಮೇಲೆ ವಿವರಿಸಿದ ವಿಶಾಲ ವ್ಯಾಪ್ತಿಯ ಹಿನ್ನೆಲೆಯಲ್ಲಿ 'ಸಾಮಾಜಿಕ ಚಿಂತನ ಮಾಲೆ'ಯನ್ನು ರೂಪಿಸಲಾಗಿದೆ. ಕನ್ನಡದ ಸಾಮಾನ್ಯ ಓದುಗರನ್ನು ಗಮನದಲ್ಲಿಟ್ಟುಕೊಂಡು ರೂಪುಗೊಂಡಿರುವ ಈ ಮಾಲೆಯ ಪುಸ್ತಕಗಳು ಏಕಕಾಲಕ್ಕೆ ಪರಿಚಯಾತ್ಮಕವೂ, ಚಿಂತ ನಾತ್ಮಕವೂ ಆಗಿರಬೇಕೆಂದು ಅಪೇಕ್ಷಿಸಲಾಗಿದೆ. ಒಟ್ಟಿನಲ್ಲಿ ಇದು, ಸಾಮಾನ್ಯ ಓದುಗರು ಸಾಮಾಜಿಕ ಚಿಂತನೆಯ ವಿವಿಧ ವಿನ್ಯಾಸಗಳನ್ನು ಅರಿವಿಗೆ ತಂದುಕೊಂಡು ಹೆಚ್ಚಿನ ಓದಿಗೆ ಆಸಕ್ತರಾಗುವಂತೆ ಮಾಡುವ ಒಂದು ವಿನಯಪೂರ್ವಕ ಪ್ರಯತ್ನವಾಗಿದೆ.

ಈ ಸಂದರ್ಭದಲ್ಲಿ ಒಂದು ಮುಖ್ಯ ಸಂಗತಿಯನ್ನು ಹೇಳಲೇ ಬೇಕು. ಸಾಮಾಜಿಕ ಚಿಂತನ ಮಾಲೆಯು ಈ ರೂಪವನ್ನು ಪಡೆಯು ವುದಕ್ಕೆ, ಮೊದಲ ಪ್ರೇರಣೆ ಒದಗಿಸಿದವರು ಅಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿದ್ದ ಶ್ರೀ ಎಚ್. ವಿಶ್ವನಾಥ್ ಅವರು. ಶ್ರೀ ವಿಶ್ವನಾಥ್ ಅವರಿಗೆ ಕೆಲವು ಸಮಾಜ ಸುಧಾರಕರ ಬಗ್ಗೆ ಕಿರು ಪುಸ್ತಕಗಳನ್ನು ಅಚ್ಚು ಮಾಡಿಸಿ ಕಡಿಮೆ ಬೆಲೆಗೆ ಒದಗಿಸಬೇಕೆಂಬ ಮಹದಾಕಾಂಕ್ಷೆಯಿತ್ತು. ಈ ಕೆಲಸವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿ ಯೋಜನೆಯೊಂದನ್ನು ಸಿದ್ಧಪಡಿಸುವ ಸಂಪೂರ್ಣ ಹೊಣೆಗಾರಿಕೆಯನ್ನು ನೀಡಿದ್ದಲ್ಲದೆ, ಈ ಯೋಜನೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ವಿಶೇಷ ಅನುದಾನವನ್ನು ಮಂಜೂರು ಮಾಡಿದರು. ಶ್ರೀ ವಿಶ್ವನಾಥ್ ಅವರ ಸಹಕಾರವನ್ನು ಕೃತಜ್ಞತೆ ಯಿಂದ ನೆನೆಯುವುದು ನನ್ನ ಕರ್ತವ್ಯವಾಗಿದೆ.

ಇದೇ ಸಂದರ್ಭದಲ್ಲಿ, ಸಹಕಾರವನ್ನು ಮುಂದುವರೆಸಿದ ಇಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀ ಆರ್. ಎನ್. ನಾಯಕ್ ಅವರಿಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಿಗೂ ಕಾರ್ಯದರ್ಶಿಗಳಿಗೂ ಧನ್ಯವಾದಗಳು.

ಸಾಮಾಜಿಕ ಚಿಂತನ ಮಾಲೆಯ ಪುಸ್ತಕಗಳನ್ನು ಬರೆದುಕೊಟ್ಟ ವಿವಿಧ ಲೇಖಕರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತ, ಕನ್ನಡ ಓದುಗರು ಈ ಪುಸ್ತಕಗಳನ್ನು ಓದಿ ಅಕಾಡೆಮಿಯ ಆಶಯವನ್ನು ಸಾರ್ಥಕ ಗೊಳಿಸಬೇಕೆಂದು ವಿನಂತಿಸುತ್ತೇನೆ.

ಅಕ್ಟೋಬರ್ ೧೯೯೪
ಬೆಂಗಳೂರು

ಬರಗೂರು ರಾಮಚಂದ್ರಪ್ಪ
ಅಧ್ಯಕ್ಷರು

ಲೇಖಕರ ಮಾತು

ಈ ಪುಸ್ತಕ ರಚನೆಯ ಅವಕಾಶ ಒದಗಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಮತ್ತು ಈ ಕೆಲಸದಲ್ಲಿ ಸಹಕಾರ ನೀಡಿದ ಸ್ನೇಹಿತರಿಗೆ, ಹಿತೈಷಿಗಳಿಗೆ ಕೃತಜ್ಞತೆಗಳು.

ಡಾ. ಜಿ. ಎಸ್. ಮೋಹನ್

ಅಲ್ಲೂರಿ ಸೀತಾರಾಮರಾಜು

ಅಧ್ಯಾಯ ೧

ಪರಿಚಯ

ಆಧುನಿಕ ಯುಗದಲ್ಲಿ ರಾಷ್ಟ್ರೀಯ ಆಂದೋಲನಾಭಾವಕ್ಕೆ ಮೂಲಪುರುಷನಾಗಿರುವನು ರೂಸೊ ಎಂದು ಪ್ರಸಿದ್ಧವಾಗಿದೆ. ಒಂದು ಜನಾಂಗಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳಲ್ಲಿಯೂ ಸ್ವಾತಂತ್ರ್ಯ ಇರಬೇಕೆಂದು, ಆ ಜನಾಂಗದ ಭವಿಷ್ಯವನ್ನು ತಿದ್ದುಕೊಳ್ಳಬೇಕಾದ್ದು ಆ ಜನಾಂಗವೇ ಹೊರತು ಬೇರೆಯವರಲ್ಲವೆಂದು ಪ್ರತಿಪಾದಿಸಿದ್ದಾನೆ. ಜನಾಂಗದ ಮೇಲು ಕೀಳುಗಳನ್ನು ತಾರತಮ್ಯ ಮನೋಭಾವವನ್ನು ತಾನೇ ಸರಿಪಡಿಸಿಕೊಳ್ಳಬೇಕೆಂಬ ಆಕಾಂಕ್ಷೆ ಪ್ರತಿ ಜನಾಂಗದಲ್ಲಿಯೂ ಇರುವುದಾಗಿ, ಇದು ಸ್ವಾತಂತ್ರ್ಯ, ಸೌಭ್ರಾತೃತ್ವ ಪ್ರತಿಪಾದಕವಾಗಿ, ಅನ್ಯದೇಶೀಯ ಸರ್ಕಾರಗಳ ಆಡಳಿತದ ಮೇಲಿನ ದಂಗೆಯಾಗಿ ವ್ಯಕ್ತಮೋರುತ್ತದೆ. ಇದನ್ನೇ ರಾಷ್ಟ್ರೀಯ ಆದೋಲನ ಅಥವಾ ಸ್ವಾತಂತ್ರ್ಯ ಸಂಗ್ರಾಮ ಎಂಬುದಾಗಿ ಕರೆಯಲಾಗಿದೆ.

ಭಾರತ ದೇಶದಲ್ಲಿ ಬ್ರಿಟಿಷ್ ಸರ್ಕಾರ ಬೇರೂರಿ ನಿಂತಾಗ ಬ್ರಿಟಿಷರ ಆಳ್ವಿಕೆಯನ್ನು ಕೊನೆಮಾಡಿ ಸ್ವರಾಜ್ಯವನ್ನು ಸ್ಥಾಪಿಸಲು ಭಾರತೀಯರು ಮಾಡಿದ ಆಂದೋಲನವೇ ಸ್ವಾತಂತ್ರ್ಯ ಹೋರಾಟ. ೧೮೫೭ ಮೇ ೧೦ ರಂದು ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ನಡೆಯಿತು. ಅಂತೆಯೇ

ಎರಡನೆಯ ಸ್ವಾತಂತ್ರ್ಯ ಸಂಗ್ರಾಮ ೧೯೪೫ ಸೆಪ್ಟೆಂಬರ್ ೩ ರಂದು ನಡೆಯಿತು. ಇಂತಹ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಪೂರ್ವ ಭಾವಿಯಾಗಿಯೇ ಎಂಬಂತೆ ಪ್ರಧಾನವಾಗಿ ಬಂಗಾಳ, ಮಹಾರಾಷ್ಟ್ರ ರಾಜ್ಯಗಳಲ್ಲಿ ವಿದೇಶೀ ಸರ್ಕಾರಕ್ಕೆ ವಿರುದ್ಧವಾಗಿ ಪ್ರತಿಘಟನೆಗಳು ಆಂದೋಳನಗಳು ಜರುಗಿದವು. ಇಂತಹ ಪ್ರತಿಘಟನೆಗಳಲ್ಲಿ ನೇತೃತ್ವ ವನ್ನು ವಹಿಸಿಕೊಂಡ ಸಾಹಸಿಗರಲ್ಲಿ ನೇತಾಜೀ ಸುಭಾಷ ಚಂದ್ರ ಬೋಸ್, ಝಾನ್ಸೀ ಲಕ್ಷ್ಮೀಬಾಯಿ ಮೊದಲಾದವರು ಪ್ರಮುಖರು.

ಆಂಧ್ರ ದೇಶದಲ್ಲಿ ಸಾಹಸವೀರರಿಗೆ, ಚಾರಿತ್ರಿಕ ಪುರುಷರಿಗೆ, ತ್ಯಾಗಧನರಿಗೆ ಕಡಿಮೆಯಿಲ್ಲ. ಏಕಕಾಲದಲ್ಲಿ ಇವೆಲ್ಲವೂ ಆಗಿರುವ ಮಹಾಪುರುಷ ಅಲ್ಲೂರಿ ಸೀತಾರಾಮರಾಜು. ಇವರು ಇಂದು ಇಲ್ಲ ದಿದ್ದರೂ, ಇವರು ಬಿತ್ತಿದ ಬೀಜಗಳು ಆಂಧ್ರ ದೇಶದ ಮೂಲೆ ಮೂಲೆಯಲ್ಲಿಯೂ ಪಲವಾರು ಅಲ್ಲೂರಿ ಸೀತಾರಾಮರಾಜುರನ್ನು ಬೆಳಸಿ ನಿಲ್ಲಿಸಿರುವುದನ್ನು ನಾವು ನೋಡಬಹುದಾಗಿದೆ. ಧೈರ್ಯ ಸಾಹಸಗಳಿಗೆ ಅಲ್ಲೂರಿಯವರು ಹೆಸರುವಾಸಿಯಾದವರು. ಇವರು ಸ್ವಾತಂತ್ರ್ಯ ಸಮರದಲ್ಲಿ ತೋರಿದ ಸ್ಫೂರ್ತಿ, ಚೈತನ್ಯಗಳು ಇಂದು ಎಲ್ಲ ಭಾರತೀಯರು ಮೆಚ್ಚುವಂತಹುದು. ಇಂತಹ ವ್ಯಕ್ತಿತ್ವವುಳ್ಳ ಇವರ ಜೀವನ ಮತ್ತು ಧ್ಯೇಯಗಳನ್ನು, ಸಾಹಸಗಳನ್ನು ಕನ್ನಡಿಯಲ್ಲಿ ಹಿಡಿಯುವಂತೆ ಪರಿಚಯ ಮಾಡುವುದು ಈ ಕಿರುಪುಸ್ತಕದ ಉದ್ದೇಶ.

ಇದೊಂದು ಸಾಹಸಕಥೆ. ನಮ್ಮ ಸ್ವಾತಂತ್ರ್ಯದ ಅಪೇಕ್ಷೆಗೆ ಬೆಳಕಿನ ದಾರಿ ತೋರಿದ ಒಬ್ಬ ತ್ಯಾಗಪುರುಷನ ವೀರಗಾಥೆ ಇದು. ದಾಸ್ಯದಲಿ ತಮ್ಮ ಜೀವನವನ್ನು ಸಾಗಿಸುತ್ತಿರುವವರ ಹೃದಯ ಕುಹರ ಗಳಲ್ಲಿ ಕ್ರಾಂತಿ ಬೀಜಗಳನ್ನು ಬಿತ್ತಿದ ಕ್ರಾಂತಿಕಾರನ ಅಮರಕಥೆ ಇದು. ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯನ್ನು ಕೊನೆಗೊಳಿಸಲು ವಿಪ್ಲವ ಜ್ಯೋತಿಯನ್ನು ಬೆಳಗಿಸಿದ ಒಬ್ಬ ಅಗ್ರಗಣ್ಯನೂ, ನಾಯಕನೂ ಅಲ್ಲೂರಿ ಸೀತಾರಾಮರಾಜು.

ಅಧ್ಯಾಯ ೨

ಜನನ, ಬಾಲ್ಯ ಮತ್ತು ವಿದ್ಯಾಭ್ಯಾಸ

ಅಲ್ಲೂರಿ ಸೀತಾರಾಮರಾಜನ ತಾಯಿತಂದೆಗಳು ಈತನ ಹೆಸರನ್ನು 'ಶ್ರೀರಾಮರಾಜ' ಎಂದು ನಾಮಕರಣ ಮಾಡಿದ್ದರು; ನಂತರ ಈತನು ಖ್ಯಾತಿ ಪಡೆದು 'ಅಲ್ಲೂರಿ ಸೀತಾರಾಮರಾಜು' ಎಂದು ಎನಿಸಿಕೊಂಡನು. ಈತನು ಕ್ಷತ್ರಿಯ ಕುಮಾರನು; ಧೈರ್ಯ ಸಾಹಸಗಳೇ ಈತನ ಸಹಜ ಕವಚಗಳಾಗಿದ್ದವು. ಈತನ ತಾಯಿ ಸೂರ್ಯನಾರಾಯಣಮ್ಮನವರು, ತಂದೆ ಅಲ್ಲೂರಿ ವೆಂಕಟರಾಮರಾಜುರವರು; ತಂಗಿ ಸೀತಮ್ಮ ಮತ್ತು ತಮ್ಮ ಸತ್ಯನಾರಾಯಣರಾಜುರವರು.

ಆಂಧ್ರಪ್ರದೇಶದಲ್ಲಿ ವಿಶಾಖಪಟ್ಟಣಂ ಜಿಲ್ಲೆಯ 'ಪಾಂಡ್ರಂಕೆ' ಎಂಬ ಗ್ರಾಮದಲ್ಲಿ ಮಾತಾಮಹರಾದ ಮಂದಲಪಾಟಿ ಶ್ರೀರಾಮರಾಜುರವರ ಮನೆಯಲ್ಲಿ ೧೮೯೭ರ ಜುಲೈ ತಿಂಗಳ ೪ನೆಯ ದಿನಾಂಕದಂದು ಸೀತಾರಾಮರಾಜನ ಜನನವಾಯಿತು. ಚಿಕ್ಕಂದಿನಲ್ಲಿ ಇವರನ್ನು 'ಚಿಟ್ಟಿಬಾಬು' ಎಂದು ಮನೆಯವರು ಕರೆಯುತ್ತಿದ್ದರು.

೧೯೦೮ರಲ್ಲಿ ವೆಂಕಟರಾಮರಾಜುರವರು ತೀರಿಕೊಂಡ ನಂತರ ತಾಯಿಯಾದ ಸೂರ್ಯನಾರಾಯಣಮ್ಮರವರು ಹಿರಿಯ ಮಗನಾದ ರಾಮರಾಜು, ಮಗಳಾದ ಸೀತಮ್ಮ, ಕಿರಿಯ ಮಗನಾದ ಸತ್ಯನಾರಾಯಣರಾಜುರವರೊಂದಿಗೆ ಜೀವನವನ್ನು ಬಹುಕಷ್ಟಗಳೊಂದಿಗೆ ನಡೆಸಿದಳು. ತಂದೆಯವರು ತೀರಿಕೊಂಡ ಸಮಯದಲ್ಲಿ ರಾಮರಾಜು ಭೀಮವರಂ ಮಿಶನ್ ಹೈಸ್ಕೂಲ್‌ನಲ್ಲಿ ಇನ್ನೂ ಫಸ್ಟ್‌ಫಾರಮ್ ಓದು

ತ್ತಿದ್ದನು. ಈ ಕಾಲದಲ್ಲೇ ಈತನ ಚಿಕ್ಕಪ್ಪನವರಾದ ಶ್ರೀರಾಮಕೃಷ್ಣ ರಾಜು ಈತನ ಕುಟುಂಬವನ್ನು ಪೋಷಿಸಿದರು. ಆಗ ಈತನು ಟ್ರೆಜರೀ ಡಿಪ್ಯೂಟಿ ಕಲೆಕ್ಟರ್‌ರಾಗಿ ಕೆಲಸಮಾಡುತ್ತಿದ್ದರು. ಇವರಿಗೆ ಆಂಧ್ರದ ಹಲವಾರು ಪಟ್ಟಣಗಳಿಗೆ ಟ್ರಾನ್ಸ್‌ಫರ್ ಆಗುತ್ತಿತ್ತು. ಆ ಎಲ್ಲ ಪ್ರದೇಶಗಳಿಗೂ ಇವರೊಂದಿಗೆ ಜತೆಗೂಡಿ ಈ ಕುಟುಂಬವೂ ತಮ್ಮ ಜೀವನ ಯಾತ್ರೆಯನ್ನು ನಡೆಸುತ್ತಿತ್ತು.

ತಾಯಿ ತೋರಿಸಿದ ಪ್ರೀತಿಯೇ ರಾಮರಾಜನನ್ನು ವೀರಕುಮಾರನನ್ನಾಗಿ ಮಾಡಿ ಚರಿತ್ರೆಯ ಪುಟಗಳಲ್ಲಿ ಈತನ ಹೆಸರನ್ನು ಸುವರ್ಣಾಕ್ಷರಗಳಿಂದ ಬರೆಯುವಂತೆ ಮಾಡಿತು.

ಕಾಕಿನಾಡದಲ್ಲಿ ಥರ್ಡ್‌ಫಾರಮ್ ಓದುವ ಕಾಲದಲ್ಲಿಯೇ (೧೯೧೨ರಲ್ಲಿ) ರಾಮರಾಜನಿಗೆ ನಾಟಕಗಳೆಂದರೆ ಹೆಚ್ಚು ಅಭಿಮಾನವಿತ್ತು. ಹಲವಾರು ನಾಟಕಗಳಲ್ಲಿ ವೇಷಗಳನ್ನು ಧರಿಸಿದರು. ಮ್ಯಾಜಿಕ್ ಮತ್ತು ತಾಲಿಂಖಾನಾಗಳೆಂದರೆ ಆತನಿಗೆ ತುಂಬಾ ಪ್ರೀತಿ. ಅಂದು ವ್ಯಾಯಾಮ ವಿದ್ಯೆಯ ಮೇಲೆ ತೋರಿದ ಆಸಕ್ತಿಯೇ ನಂತರ ಆತನ ಭಾವಿಜೀವನದಲ್ಲಿ ಸಹಕರಿಸಿರಬೇಕೆಂದು ಹೇಳಬಹುದು. ಆದರೆ ಇವೆಲ್ಲವೂ ಆತನ ವಿದ್ಯಾಭ್ಯಾಸಕ್ಕೆ ಅಡ್ಡಿಯನ್ನುಂಟುಮಾಡಿದವು.

ತಾಯಿಯವರ ದೈವಭಕ್ತಿ, ಧರ್ಮನಿರತತೆ ಸೀತಾರಾಮರಾಜನಿಗೆ ಸಂಕ್ರಮಿಸಿತು. ತಂದೆಯಿಂದ ಫೋಟೋಗ್ರಫೀ, ಚಿತ್ರಲೇಖನ ಮುಂತಾದ ಕಲೆಗಳನ್ನು ಕಲಿತನು. ಸ್ವಾತಂತ್ರ್ಯ ಪ್ರೀತಿ, ದೇಶಭಕ್ತಿ, ರಾಷ್ಟ್ರೀಯತಾ ಭಾವ, ದೀನಜನೋದ್ಧಾರ, ಛಲ ಮುಂತಾದುವುಗಳು ಸಹಾ ಇವರಿಗೆ ತಂದೆಯಿಂದಲೇ ಸಂಕ್ರಮಿಸಿದವು.

ಇವರಿಗೆ ೧೪ನೆಯ ವರ್ಷದಲ್ಲಿ ಉಪನಯನ ನಡೆಯಿತು. ವಿಶಾಖಪಟ್ಟಣದಲ್ಲಿ ಕೆಲವು ಕಾಲ ಮತ್ತು ನರಸಾಪುರಂನಲ್ಲಿ ಕೆಲವು ಕಾಲ (೧೯೧೩) ಈತನು ಫೋರ್ತ್‌ಫಾರಮ್ ಓದಿದನು. ಆಂಗ್ಲವಿದ್ಯೆಯನ್ನು ಕೈಬಿಟ್ಟರೂ ಇಂಗ್ಲೀಷ್‌ನಲ್ಲಿ ಚೆನ್ನಾಗಿ ಮಾತನಾಡುವುದನ್ನು

ಕಲಿತನು. ಈತನ ಕುಟುಂಬವು ತುನಿಯಲ್ಲಿದ್ದಾಗ ಅಲ್ಲಿ ತುನಿ ಆಸ್ಥಾನ ಕವಿಯಾಗಿದ್ದ ವತ್ಸವಾಯಿ ನೀಲಾದ್ರಿರಾಜುರವರ ಮನೆಯಲ್ಲಿ ಕೆಲವು ಕಾಲ ವಾಸವಾಗಿದ್ದರು. ಈತನು ಅವರ ಹತ್ತಿರ ಜ್ಯೋತಿಷ್ಯ, ಹಠ ಯೋಗ ಮುಂತಾದುವುಗಳನ್ನು ಕಲಿತನು. ತಂದೆ ಹೋದ ನಂತರ ಮನೆಯ ಜವಾಬ್ದಾರಿಯನ್ನು ತೆಗೆದುಕೊಳ್ಳದೇ ಇರುವುದರಿಂದ ತಾಯಿಯೇ ಎಲ್ಲ ಜವಾಬ್ದಾರಿಯನ್ನು ತೆಗೆದುಕೊಂಡರು. ಈ ವಿಷಯ ವನ್ನು ತಿಳಿದ ನೀಲಾದ್ರಿರಾಜುರವರು ಈತನ ಜಾತಕವನ್ನು ತರಿಸಿಕೊಂಡು "ಇವನದು ಉದ್ಯೋಗ ಮಾಡುವ ಜಾತಕವಲ್ಲ. ಸುಮ್ಮನೇ ಅವನನ್ನು ಬಾಧಿಸಬೇಡ ಒಳ್ಳೆಯ ಕೀರ್ತಿವಂತನಾಗುತ್ತಾನೆ" ಎಂದು ಹೇಳಿದರು. ಒಮ್ಮೆ ಒಬ್ಬ ಸಂತನು ಇವರ ಮನೆಗೆ ಬಂದು ಈತನ ಕೈಯನ್ನು ನೋಡಿ 'ಈತನಿಗೆ ೨೭ನೆಯ ವಯಸ್ಸಿನಲ್ಲಿ ಗಂಡಾತರವಿದೆ, ಇದು ತಪ್ಪಿ ದರೆ ಈತನು ಡಿಲ್ಲಿ ಮಹಾರಾಜ ಆಗುವ'ನೆಂದು ಹೇಳಿದನಂತೆ.

ತಾಯಿಯ ಭಾವನೆಗಳಿಗೂ, ರಾಜುವಿನ ಆಲೋಚನೆಗೂ, ಯಾವ ಹೋಲಿಕೆಯೂ ಇರಲಿಲ್ಲ. ಈತನಿಗೆ ದುಡ್ಡಿನ ಲಕ್ಷ್ಯವಿರಲಿಲ್ಲ. ತಾಯಿ ಯನ್ನು ಕೇಳಿ ದುಡ್ಡು ತೆಗೆದುಕೊಂಡು ಹೋಗುತ್ತಿದ್ದನಷ್ಟೆ. ಈತನ ಬಾಲ್ಯ ಜೀವನವು ಹರಿದ ಗಾಳಿಪಟದಂತಿತ್ತು. ಆದುದರಿಂದಲೇ ಈತನು ಯಾವ ಶಾಲೆಯಲ್ಲಿಯೂ ಕ್ರಮವಾಗಿ ಓದಲಿಲ್ಲ ಯಾವ ಊರಲ್ಲಿಯೂ ಒಮ್ಮೆಲೆ ವಾಸಿಸಲಿಲ್ಲ. ಈತನು ವಿದ್ಯಾಭ್ಯಾಸವನ್ನು ೧೭ನೆಯ ವಯಸ್ಸಿನಲ್ಲಿಯೇ ನಿಲ್ಲಿಸಿಬಿಟ್ಟನು.

ಉದ್ಯೋಗವನ್ನು ಸಂಪಾದಿಸಿಕೊಳ್ಳುತ್ತೇನೆ, ದುಡ್ಡು ಕೊಡಿ ಎಂದು ತಾಯಿಯನ್ನು ಕಾಡಿ ಕಾಶಿಗೆ ಹೊರಟು ಹೋದನು. ಕಾಶಿಗೆ ಹೋಗುವುದಕ್ಕಿಂತ ಮುಂಚೆಯೇ ಈತನು ಕಾಳೀ ಉಪಾಸಕನಾದನು. ತನ್ನ ತಮ್ಮನಾದ ಸತ್ಯನಾರಾಯಣರಾಜುವಿಗೆ ೨೧ ಬೀಜಾಕ್ಷರವುಳ್ಳ ಕಾಳಿಕಾದೇವಿ ಮಂತ್ರವನ್ನು ಉಪದೇಶಿಸಿದನು.

ಅಲ್ಲೂರಿಯವರ ವಂಶವೃಕ್ಷ

ಅಲ್ಲೂರಿ ಗೋಪಾಲ ಕೃಷ್ಣಂರಾಜು

|

ಅಲ್ಲೂರಿ ವೆಂಕಟಕೃಷ್ಣಂರಾಜು

೧ ರಾಮಚಂದ್ರರಾಜು

೨ ವೆಂಕಟರಾಯರಾಜು

೩ ರಾಮಕೃಷ್ಣಂರಾಜು

೪ ರಂಗರಾಜು

೫ ರಾಮಭದ್ರರಾಜು

(ಹೆಂಡತಿ ಸೂರ್ಯನಾರಾಯಣಮ್ಮ)

೧ ಶ್ರೀರಾಮರಾಜು (ಕ್ರಾಂತಿಕಾರ ಸೀತಾರಾಮರಾಜು)

೨ ಸತ್ಯನಾರಾಯಣರಾಜು

೩ ಸೀತಮ್ಮ

ಅಧ್ಯಾಯ ೩

ಯಾತ್ರೆಗಳು

ರಾಜು ಕಾಶಿಯಿಂದ ಹರಿದ್ವಾರ, ಅಲ್ಲಿಂದ ಭಯಂಕರವಾದ ಅರಣ್ಯ ಮಾರ್ಗದಲ್ಲಿ ೨೦೦ ಮೈಲಿಗಳು ನಡೆದು ಬ್ರಹ್ಮಕಪಾಲವನ್ನು ತಲುಪಿದನು. ಹರಿದ್ವಾರ ತಲುಪಿದ ಕೂಡಲೆ ತಾಯಿಯವರಿಗೆ ಪತ್ರ ಬರೆದನು. ಈತನು ಬ್ರಹ್ಮಕಪಾಲದಲ್ಲಿರುವಾಗಲೇ ಸನ್ಯಾಸ ದೀಕ್ಷೆ ತೆಗೆದುಕೊಂಡಿರಬೇಕೆಂದು ತಿಳಿಯುತ್ತದೆ. ಬ್ರಹ್ಮಕಪಾಲದಲ್ಲಿ ಪಿತೃ ದೇವತೆಗಳಿಗೆ ಯಥಾವಿಧಿಯಾಗಿ ಪಿಂಡ ಪ್ರದಾನವನ್ನು ಮಾಡಿ ಅಲ್ಲಿಂದ ಹರಿದ್ವಾರಕ್ಕೆ ಹಿಂತಿರುಗಿ ಬಂದನು. ಮಾರ್ಗ ಮಧ್ಯದಲ್ಲಿ ಋಷಿಕೇಶ, ಬದರೀನಾಥ, ಕೇದಾರ್‌ನಾಥ, ಗಂಗೋತ್ರಿ, ಯಮುನೋತ್ರಿ ಮುಂತಾದ ಪವಿತ್ರ ಪುಣ್ಯ ಕ್ಷೇತ್ರಗಳನ್ನು ದರ್ಶಿಸಿ ಮನೆಗೆ ಬಂದನು. ಈ ಸಾಹಸ ಯಾತ್ರೆಯು ಈತನ ಭವಿಷ್ಯದ್ಭ್ಯಾಂತಿ ಮಾರ್ಗಕ್ಕೆ ಅತ್ಯಂತ ಉಪಯುಕ್ತವಾಯಿತೆಂದು ಹೇಳಬಹುದು.

ಅನಂತರ ಒಂದು ದಿನ ಯಾರಿಗೂ ಹೇಳದೇ ಹೊರಟು ಹೋದನು. ತಾಯಿ ತುಂಬಾ ದುಃಖಿಸಿದಳು. ಆ ಸಮಯದಲ್ಲಿ ಈತನು ಇನ್ನೊಮ್ಮೆ ಉತ್ತರ ಭಾರತ ದೇಶದ ಯಾತ್ರೆಯನ್ನು ಮಾಡಿದನು. ಕಾಶಿಯಲ್ಲಿ ಒಂದು ವರ್ಷದ ಕಾಲ ತಂಗಿದ್ದು ಸಂಸ್ಕೃತ ಭಾಷೆಯನ್ನು ಕಲಿತನು. ಈತನ ನಿಯಮನಿಷ್ಠೆಗಳನ್ನು ನೋಡಿ ಬ್ರಾಹ್ಮಣ

ವಿದ್ಯಾರ್ಥಿಗಳು ಈತನನ್ನು ಬ್ರಾಹ್ಮಣನೆಂದೇ ಭಾವಿಸಿದರು. ನಂತರ ಈತನು ಕ್ಷತ್ರಿಯನೆಂದು ತಿಳಿದು ಶಿಕ್ಷಿಸಲು ಪ್ರಯತ್ನಿಸಿದರು. ಆದರೆ ಈತನು ಮಾರುವೇಷದಿಂದ ತಪ್ಪಿಸಿಕೊಂಡು ಅಲ್ಲಿಂದ ಹೊರಟು ಹೋದನು. ಈ ಯಾತ್ರಾ ಸಮಯದಲ್ಲಿಯೇ ಈತನು ಬಸ್ತರ್ ರಾಜ ಕುಟುಂಬದಲ್ಲಿ ಕೆಲವು ದಿವಸಗಳಿದ್ದನು. ಪೂರೀ ಜಗನ್ನಾಥ, ಪ್ರಯಾಗ, ನಾಸಿಕಾತ್ರ್ಯಂಬಕ, ಉಜ್ಜಯಿನಿ ಮುಂತಾದ ಪುಣ್ಯ ಕ್ಷೇತ್ರಗಳನ್ನು ನೋಡಿ ಮುಂಬಯಿ, ಬರೋಡಾ, ಅಮೃತಸರ್ ಮುಂತಾದ ಪಟ್ಟಣಗಳನ್ನು ಸಂದರ್ಶಿಸಿದನು. ಅಸ್ಸಾಮ್, ನಾಗಾ ಪರ್ವತಗಳು, ನೇಪಾಳ, ಕಾಶ್ಮೀರ ಮುಂತಾದ ಪ್ರದೇಶಗಳನ್ನು ತಿರುಗಿ ಹಿಮಾಲಯ ಪರ್ವತಗಳಲ್ಲಿ ಕೆಲವು ಕಾಲ ತಪಸ್ಸು ಮಾಡಿ ಮನೆಗೆ ಹಿಂತಿರುಗಿ ಬಂದನು. ಈ ಯಾತ್ರಾ ಸಮಯದಲ್ಲಿ ಲೋಕಜ್ಞಾನದೊಂದಿಗೆ ಹೆಚ್ಚು ಭಾಷೆಗಳನ್ನು, ವಿದ್ಯೆಗಳನ್ನು ಕಲಿತನು. ಬಾಣ ಪ್ರಯೋಗ, ಕುದರೆ ಸವಾರಿ, ಕತ್ತಿ ವರಸೆ ಗುಂಡು ಹಾರಿಸುವುದು ಮುಂತಾದ ಯುದ್ಧ ವಿದ್ಯೆಗಳನ್ನು, ಅಶ್ವ, ಗಜ, ವೃಷಭ ಶಾಸ್ತ್ರಗಳನ್ನು, ವಾಸ್ತು ಶಾಸ್ತ್ರ, ಹಸ್ತ ಸಾಮುದ್ರಿಕ, ರಸಾಯನ ಶಾಸ್ತ್ರಗಳನ್ನು ಅಭ್ಯಸಿಸಿದನು. ಹಿಂದೀ, ಇಂಗ್ಲೀಷ್, ಉರ್ದು ಮುಂತಾದ ಭಾಷೆಗಳನ್ನು ನಿರರ್ಗಳವಾಗಿ ಮಾತನಾಡುತ್ತಿದ್ದನು. ಯೋಗಾಭ್ಯಾಸ ಮಾಡಿದನು, ಅದೃಶ್ಯ ಶಕ್ತಿಯು ಈತನಲ್ಲಿ ಇತ್ತೆಂದು ಈತನ ಅನುಚರರು ಹೇಳುತ್ತಿದ್ದರಂತೆ.

ಭವಿಷ್ಯದಾಕಾಂಕ್ಷೆಗೆ ತಕ್ಕ ಶಕ್ತಿಯುಕ್ತಿಗಳನ್ನು, ಸಾಧನ ಸಾಮಗ್ರಿಯನ್ನು ಸೀತಾರಾಮರಾಜು ಈ ಯಾತ್ರಾ ಸಮಯದಲ್ಲಿ ಸಂಪಾದಿಸಿಕೊಂಡನು. ಅಲ್ಲದೆ ಬಂಗಾಳ, ಪಂಜಾಬ್ ಮುಂತಾದ ಪ್ರದೇಶಗಳಲ್ಲಿನ ಕ್ರಾಂತಿಕಾರಿ ನಾಯಕರ ಗೆಳೆತನವೂ ಆಯಿತು. ಆಂಧ್ರದೇಶದಲ್ಲಿ ಕ್ರಾಂತಿಕಾರಿ ಆಂದೋಲನ ಜ್ಯೋತಿಯನ್ನು ಬೆಳಗಿಸಲು ಸಶಸ್ತ್ರ ಹೋರಾಟದಿಂದ ಬ್ರಿಟಿಷರನ್ನು ಎದುರಿಸಲು ಆತನಿಗೆ ಸ್ಫೂರ್ತಿ ದೊರೆತಂತಾಯಿತು. ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕೆಂಬ ಇಚ್ಛೆ ದೃಢ

ವಾಯಿತು. ಈಗ ರಾಜುವಿನ ವೇಷಧಾರಣೆಯೇ ಬದಲಾಗಿತ್ತು. ಕಪ್ಪುಕೋಟು, ಷರಟು, ಪೈಜಾಮ ಧರಿಸಿ ಕ್ರಾಪು ಬಿಟ್ಟಿದ್ದ ರಾಜು ಈಗ ಕಾವಿಪಂಚೆ, ಕಾವಿ ಮೇಲು ಹೊದ್ದಿಕೆಯನ್ನು ಧರಿಸಿದ. ಮುಖ ದಲ್ಲಿ ಅತ್ಯಂತ ತೇಜಸ್ಸು ತಾಂಡವವಾಡುತ್ತಿತ್ತು. ಕೆನ್ನೆ, ಗಲ್ಲಗಳ ತುಂಬಾ ದಟ್ಟವಾದ ಕಪ್ಪು ಗಡ್ಡ ಮೀಸೆಗಳು ಬೆಳೆದಿದ್ದವು. ತಲೆ ತುಂಬಾ ಉದ್ದನೆಯ ಗುಂಗುರು ಕೂದಲು, ಹಣೆಯ ಮೇಲೆ ಉದ್ದ ನೆಯ ಕೆಂಪು ತಿಲಕವು ಇದ್ದು ಎಲ್ಲರನ್ನೂ ಆಕರ್ಷಿಸುತ್ತಿದ್ದವು.

ಮನ್ಯದಲ್ಲಿ ವಾಸ

ವಿಶಾಖಪಟ್ಟಣಂ ಗುಡ್ಡಗಳಲ್ಲಿನ ಒಂದು ಪ್ರದೇಶವನ್ನು 'ಮನ್ಯ' ಪ್ರಾಂತವೆಂದು ಕರೆಯುತ್ತಾರೆ. ಇದನ್ನು 'ಗೂಡೆಂ' ಎಂದೂ ಕರೆಯುವುದುಂಟು.

ಸೀತಾರಾಮರಾಜು ೧೯೧೭ರಲ್ಲಿ ವಿಶಾಖಪಟ್ಟಣಂ ಜಿಲ್ಲೆಯ ಕೃಷ್ಣಾದೇವಿ ಪೇಟೆಯ ಬಳಿ ಹೋಗುತ್ತಿದ್ದಾಗ ಅಲ್ಲಿ ಚಿಟಿಕೆಲ ಭಾಸ್ಕರುಡು ಎಂಬವನೊಂದಿಗೆ ಪರಿಚಯವಾಯಿತು. ತಪಸ್ಸು ಮಾಡ ಬೇಕೆಂಬ ರಾಜುವಿನ ಇಚ್ಛೆಯನ್ನು ತಿಳಿದು, ಅಲ್ಲಿನ ಗ್ರಾಮಸ್ಥರೊಂದಿಗೆ, ಅಲ್ಲಿರುವ 'ಧಾರಕೊಂಡ' ಎಂಬ ಸ್ಥಳದಲ್ಲಿ ತಪಸ್ಸು ಮಾಡಲು ಒಂದು ಆಶ್ರಮವನ್ನು ನಿರ್ಮಾಣ ಮಾಡಿಕೊಟ್ಟನಂತೆ. ಇಲ್ಲಿ ರಾಜು ಕೆಲವು ಕಾಲ ತಪಸ್ಸು ಮಾಡಿದನು. ಈತನಿಗೆ ಇನ್ನೂ ತಾಯಿ, ತಮ್ಮ, ತಂಗಿ ಇರುವರೆಂದು ತಿಳಿದು ಭಾಸ್ಕರನು, ಆತನ ತಾಯಿಯಾದ ಸೋಮಮ್ಮ ನವರನ್ನು ಬರಗೊಳಿಸಿದನು. ಹೀಗೆ ಭಿನ್ನಾಭಿನ್ನವಾದ ಈತನ ಸಂಸಾ ರವು ಮತ್ತೆ ಒಂದಾಯಿತು.

ಕೃಷ್ಣಾದೇವಿ ಪೇಟೆಗೆ ಸುಮಾರು ಒಂದು ಮೈಲಿ ದೂರದಲ್ಲಿ ತಾಂಡವನದಿಯಲ್ಲಿ 'ಚಿಕ್ಕಲ ಗಡ್ಡ' ಸೇರುವ ಸ್ಥಳದಲ್ಲಿ ಗ್ರಾಮಸ್ಥರು

ಭಕ್ತಿ ವಿಶ್ವಾಸಗಳೊಂದಿಗೆ ಎರಡು ಮನೆಗಳನ್ನು ಕಟ್ಟಿಸಿಕೊಟ್ಟು ಸೀತಾರಾಮರಾಜನ ತಾಯಿ, ತಮ್ಮ, ತಂಗಿ ಮತ್ತು ಭಾವನವರನ್ನು ಅಲ್ಲಿಗೆ ಕರೆಸಿಕೊಂಡರು. ನಂತರ ರಾಜು ಆ ಪ್ರದೇಶಕ್ಕೆ 'ಶ್ರೀರಾಮ ವಿಜಯ ನಗರಮು' ಎಂದು ಹೆಸರಿಟ್ಟನು.

ತಾಯಿಯೆಂದರೆ ಅತ್ಯಂತ ಭಕ್ತಿ ವಿಶ್ವಾಸವುಳ್ಳ ರಾಜು, ಎಲ್ಲಿಗೆ ಹೋಗಬೇಕಾದರೂ ತಾಯಿಯ ಪಾದಾಭಿವಂದನೆ ಮಾಡುತ್ತಾ, ಆಕೆಯ ಅಂಗೀಕಾರವನ್ನು ತೆಗೆದುಕೊಂಡು ಹೋಗುತ್ತಿದ್ದನು. ತನ್ನ ಕುಟುಂಬದ ಜೀವನಕ್ಕಾಗಿ ೩೦ ಎಕರೆಗಳ ನೆಲವನ್ನು ಸಹ ತೆಗೆದು ಕೊಂಡನು. ವ್ಯವಸಾಯವನ್ನು ತಮ್ಮ ಮತ್ತು ಭಾವನವರಿಗೆ ಒಪ್ಪಿಸಿ ತಾನು ತಪಸ್ಸು ಮಾಡಬೇಕೆಂದು ನಿಶ್ಚಯಿಸಿದನು. ಆದರೆ ಅವರ ಭಾವನವರು ಕೆಲವು ಕಾಲ ಮಾತ್ರವೇ ಅಲ್ಲಿದ್ದು, ತಮ್ಮ ಸ್ವಗ್ರಾಮ ವಾದ 'ರುಸ್ತುಂ ಬಾದಾ'ಗೆ ಹಿಂತಿರುಗಿದರು. ಈ ಕಾಲದಲ್ಲಿ ತಾಯಿ ರಾಜುವಿನ ಮದುವೆ ಮಾಡಲು ನಿಶ್ಚಯಿಸಿದರಾದರೂ, ಅಷ್ಟು ಹೊತ್ತಿಗೆ ಆತನು ಸನ್ಯಾಸಾಶ್ರಮವನ್ನು ಸ್ವೀಕರಿಸಿದ್ದರಿಂದ ಇದಕ್ಕೆ ರಾಜನು ಒಪ್ಪಲಿಲ್ಲ. ಕೃಷ್ಣಾದೇವಿ ಪೇಟೆಗೆ ಹತ್ತಿರವಲ್ಲಿದ್ದ ನೀಲಕಂಠೇಶ್ವರಾಲಯದಲ್ಲಿ ತಪೋನಿಷ್ಠೆಯಲ್ಲಿರುತ್ತಿದ್ದನು. ಊಟ ಮಾಡದೆ ಕೇವಲ ಹಣ್ಣು, ಹಾಲು ಮಾತ್ರ ಆಹಾರವನ್ನಾಗಿ ಸ್ವೀಕರಿಸುತ್ತಿದ್ದನು. ಅಲ್ಲಿನ ಜನರೇ ಇವುಗಳನ್ನು ತಂದುಕೊಡುತ್ತಿದ್ದರು.

ಮನ್ಯ ಪ್ರಜರಲ್ಲಿ ರಾಜು ತಂದ ಬದಲಾವಣೆ

ಹೀಗೆ ಆಧ್ಯಾತ್ಮಿಕ ಜೀವನವನ್ನು ನಡೆಸುತ್ತಿದ್ದ ರಾಜು ಸ್ವಾಭಾವಿಕವಾಗಿಯೇ ಮಾನವ ಕಾರುಣ್ಯ ಜೀವಿಯಾಗಿ ಅಲ್ಲಿರುವ ಬಡಜನರ ಯೋಗಕ್ಷೇಮಗಳನ್ನು ವಿಚಾರಿಸುತ್ತಾ, ಅವರ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳುತ್ತಾ, ಅವರೊಂದಿಗೆ ಬೆರೆತು ಅವರ ಸಮಸ್ಯೆಗಳ ಬಗ್ಗೆ

ಶ್ರದ್ಧೆವಹಿಸುತ್ತಿದ್ದನು. ಹೀಗಾಗಿ ಗುಡ್ಡಗಾಡಿನ ಜನರಿಗೆ ಈತನೆಂದರೆ ಗುರುಭಾವವುಂಟಾಯಿತು. ದಿನಬೆಳಗಾದರೆ ಅವರು ಈತನನ್ನು ಭೇಟಿ ಮಾಡುತ್ತಿದ್ದರು. ಅವರಿಗೆ ಈತನು ಆಪದ್ಬಾಂಧವನಾಗಿ ಅವರ ಎಲ್ಲ ಚಟುವಟಿಕೆಗಳಲ್ಲಿ ಆಸ್ಥೆವಹಿಸುತ್ತಿದ್ದನು.

ಚಿಕ್ಕ ಚಿಕ್ಕ ಶಾಲೆಗಳನ್ನು ಕಟ್ಟಿಸಿ ಅಲ್ಲಿನ ಮಕ್ಕಳಿಗೆ ಸಂಸ್ಕೃತಾಂಧ್ರ ಭಾಷೆಗಳನ್ನು, ಅಮರಕೋಶ ಮತ್ತು ತೆಲುಗು ಕಾವ್ಯಗಳನ್ನು ಭೋಧಿಸುತ್ತಿದ್ದನು. ಜ್ಯೋತಿಷ್ಯದಲ್ಲಿ ಪ್ರವೇಶವಿರುವುದರಿಂದ ಅಲ್ಲಿನ ಜನಗಳ ಪ್ರಶ್ನೆಗಳಿಗೆ ಪರಿಹಾರ ಹೇಳುತ್ತಿದ್ದನು. ತಾಯಿತಗಳನ್ನು, ವಿಭೂತಿಯನ್ನು ಕೊಡುತ್ತಿದ್ದನು; ಮುಹೂರ್ತಗಳನ್ನು ಸಹಾ ನಿಶ್ಚಯಿಸುತ್ತಿದ್ದನು. ಮೂಲಿಕಾವೈದ್ಯವನ್ನು ಮಾಡುತ್ತಿದ್ದನು. ಮನ್ಯಪ್ರಾಂತದ ಜನರಿಗೆ ಭಾರತ ರಾಮಾಯಣ ಕಥೆಗಳನ್ನು ಹೇಳುತ್ತಿದ್ದನು. ಬಾಲಯೋಗಿಯಾದವನು ಕಾಳೀ ಉಪಾಸಕನೂ ಆಗಿರುವುದರಿಂದ ವನ್ಯವಾಸಿಗಳನ್ನು ಇನ್ನೂ ಹೆಚ್ಚು ಆಕರ್ಷಿಸಿದನು. ಈತನು ಅಗ್ನಿದೇವನನ್ನು ಆರಾಧಿಸಿದನು. ಶ್ರೀರಾಮ ಭಕ್ತನಾಗಿರುವುದರಿಂದಲೇ ಆ ಪ್ರದೇಶಕ್ಕೆ 'ಶ್ರೀರಾಮ ವಿಜಯನಗರಮು' ಎಂಬ ಹೆಸರನ್ನಿಟ್ಟನು. ಶಿವಾಜೀ ವೀರನ ಆರಾಧಕನಾಗಿದ್ದರಿಂದ ಹೋರಾಟದಲ್ಲಿ ಹೆಚ್ಚಿನ ಉತ್ಸಾಹವನ್ನು, ಗೊರಿಲ್ಲಾ ಯುದ್ಧ ತಂತ್ರದಲ್ಲಿ ಚಾತುರ್ಯವನ್ನು ಪ್ರದರ್ಶಿಸುತ್ತಿದ್ದನು.

ಈ ವನ್ಯವಾಸಿಗಳಲ್ಲಿ ಕೆಟ್ಟ ಪದ್ಧತಿಗಳು ಆಚರಣೆಯಲ್ಲಿದ್ದವು, ನರಬಲಿ ಕೊಡುವುದು, ತಪ್ಪಿತಸ್ಥನ ಮೇಲೆ ಬಾಣಗಳ ಮಳೆಸುರಿಸುವುದು ಮುಂತಾದ ಅಮಾನುಷ ಆಚರಣೆಗಳಿದ್ದವು. ಕೋಯ ಜನಾಂಗದವರು ಸಾರಾಯಿಯ ಗುಲಾಮರಾಗಿದ್ದರು. ದುಡಿದಿದ್ದನ್ನು ಇದಕ್ಕಾಗಿಯೇ ಖರ್ಚು ಮಾಡುತ್ತಿದ್ದರು. ಇದರಿಂದ ಮನೆಯಲ್ಲಿರುವ ಹೆಂಡತಿ ಮಕ್ಕಳು ಉಪವಾಸವಿರುತ್ತಿದ್ದರು. ಇವುಗಳನ್ನು ಕಂಡ ರಾಜು ಅವರ ಈ ಅಮಾನುಷ ಪದ್ಧತಿಗಳನ್ನು ದೂರಮಾಡಲಾರಂಭಿ

ಸಿದ. ಹೀಗೆ ಸಾರಾಯಿ ಬಿಟ್ಟವರಲ್ಲಿ ಗಾಮು ಮಲ್ಲುದೊರ ಎಂಬುವವನು ಪ್ರಮುಖನು. ಮನ್ಯಂ ಪ್ರದೇಶದಲ್ಲಿಯ ಒಂದು ಗ್ರಾಮದ ಪಟೇಲ ಗಂಟಂ ದೊರ. ಇವನು ಗಾಮು ಮಲ್ಲು ದೊರನ ಅಣ್ಣ. ಇವರಿಬ್ಬರನ್ನು ಗಾಮು ಸೋದರರೆಂದು ಕರೆಯುತ್ತಾರೆ. ಈ ಸೋದರರು ಸೀತಾರಾಮರಾಜನಿಗೆ ಮುಖ್ಯ ಶಿಷ್ಯರಾದರು.

ಮದ್ಯವನ್ನು ನಿಷೇಧಿಸುವ ಜೊತೆಗೆ, ರಾಜು ಪಂಚಾಯಿತೀ ಕೋರ್ಟ್‌ಗಳನ್ನು ಸ್ಥಾಪಿಸಿದನು. ಸರ್ಕಾರೀ ನ್ಯಾಯಸ್ಥಾನಗಳಿಗೆ ಯಾರೂ ಹೋಗಬಾರದೆಂದು ತಿಳಿಸಿ, ಐದಾರು ಗ್ರಾಮಗಳಿಗೆ ಒಂದು ಕೇಂದ್ರವನ್ನು ಸ್ಥಾಪಿಸಿ, ಒಂದೊಂದು ದಿನ ಒಂದೊಂದು ಕೇಂದ್ರಕ್ಕೆ ಭೇಟಿಕೊಟ್ಟು ಅಲ್ಲಿ ಸಾಕ್ಷಿಗಳನ್ನು ವಿಚಾರಿಸಿ ತೀರ್ಪುಗಳನ್ನು ಕೊಡುತ್ತಿದ್ದನು ಸೀತಾರಾಮರಾಜು. ಅಲ್ಲಿನ ಜನರೂ ಸಹ ಇಂತಹ ತೀರ್ಪುಗಳನ್ನು ಒಪ್ಪುತ್ತಿದ್ದರು.

ಉದ್ಯೋಗಸ್ಥರ ದೌರ್ಜನ್ಯಗಳು

ಹೀಗೆ ಮನ್ಯ ಪ್ರದೇಶವವರನ್ನು ಅಯಸ್ಕಾಂತವಾಗಿ ಆಕರ್ಷಿಸಿದ ರಾಜನು ವಿಜನ್ನೀ ಪ್ರದೇಶದ ಸ್ಥಿತಿಗತಿಗಳನ್ನು ಅರಿತು, ಅವರ ಕಷ್ಟ ಸುಖಗಳನ್ನು ಕುರಿತು ವಿಚಾರಿಸುತ್ತಿದ್ದನು. ಅವರೂ ಸಹ ಅಲ್ಲಿಗೆ ಬಂದು ಹೇಳಿಕೊಳ್ಳುತ್ತಿದ್ದರು. ಮನ್ಯಜನರು ಅಮಾಯಕರು, ಅನಾಗರೀಕರು. ಪೋಲೀಸ್ ಮತ್ತು ಅಡವಿ ಪ್ರದೇಶದ ಅಧಿಕಾರಿಗಳು ಈ ವಿಜನ್ನೀ ಜನರನ್ನು ಬಾಧೆಗಳಿಗೆ ಒಳಪಡಿಸುತ್ತಿದ್ದರು. ಬಾಳೆಗೊನೆ. ಹಾಲು, ತುಪ್ಪ, ಕೋಳಿ ಮುಂತಾದವುಗಳನ್ನು ದುಡ್ಡು ಕೊಡದೆ ಅವರಿಂದ ತೆಗೆದುಕೊಂಡು ಹೋಗುತ್ತಿದ್ದರು. ಹೆದರಿಸಿ ಅವರಿಂದ ದುಡ್ಡು ಸಹ ತೆಗೆದುಕೊಳ್ಳುತ್ತಿದ್ದರು. ಆರು ಅಣೆಗಳ ಕೂಲಿ ಕೊಡುತ್ತಿದ್ದ ಆ ಕಾಲದಲ್ಲಿ ಕೇವಲ ಎರಡು ಅಣೆಗಳು ಮಾತ್ರವೇ

ಆ ಜನರಿಗೆ ಕೊಟ್ಟು ಅವರಿಂದ ಕೆಲಸಮಾಡಿಸಿಕೊಳ್ಳುತ್ತಾ, ಮಿಕ್ಕ ಹಣವನ್ನು ಆ ಅಧಿಕಾರಿಗಳು ಲಪಟಾಯಿಸುತ್ತಿದ್ದರು, ತಹಸೀಲ್ದಾರ್ ಮುಂತಾದ ಅಧಿಕಾರಿಗಳನ್ನು ಆ ಜನರು ಡೋಲಿಗಳ ಮೇಲೆ ಒಯ್ಯುತ್ತಿದ್ದರು. ಬೈಗುಳ, ಚಾಟೀ ಹೊಡೆತಗಳು ಬಿಟ್ಟರೆ ಅವರಿಗೆ ಯಾವ ಪ್ರತಿಫಲವೂ ದೊರೆಯುತ್ತಿರಲಿಲ್ಲ.

ಕಾಡುಗಳಲ್ಲಿ ದೊರೆಯುವ ಹಣ್ಣು ಹಂಪಲುಗಳನ್ನು ತಿಂದು ಜೀವಿಸುತ್ತಿದ್ದರು. ಇದೂ ದೊರೆಯದೇ ಇದ್ದ ಪಕ್ಷದಲ್ಲಿ ಮಾವಿನ ನಾಟೆಗಳಲ್ಲಿನ ಹುಂಗನ್ನು, ಹುಣಿಸೇಬೀಜಗಳನ್ನು ಪುಡಿಮಾಡಿಕೊಂಡು ಅಂಬಲಿ ಮಾಡಿಕೊಂಡು ಕುಡಿಯುತ್ತಿದ್ದರು. ಕೊಬ್ಬಿದ ಅಧಿಕಾರಿಗಳು ಅವರನ್ನು ಪೀಡಿಸುವುದಲ್ಲದೇ, ಅವರ ಸ್ತ್ರೀಯರೊಂದಿಗೆ ಅಸಭ್ಯವಾಗಿ ವರ್ತಿಸುತ್ತಿದ್ದರು. ಹೀಗೆ ಮನ್ಯವಾಸಿಗಳು ನಿಕ್ಕೃಷ್ಟವಾದ ಜೀವನವನ್ನು ಸಾಗಿಸುತ್ತಿದ್ದರು. ಇವುಗಳನ್ನು ಜನರು ಕಣ್ಣೀರು ಸುರಿಸುತ್ತಾ ರಾಜುಗೆ ಹೇಳುತ್ತಿದ್ದರು.

ಅಧ್ಯಾಯ ೪

ಕ್ರಾಂತಿಯ ಆಶಯ - ರಾಜುವಿನ ನೇತೃತ್ವ

ಮನ್ಯಪ್ರದೇಶ ವಾಸಿಗಳ ಕಷ್ಟಕಾರ್ಪಣ್ಯಗಳನ್ನು ಕೇಳುತ್ತಿದ್ದ ರಾಜನು 'ಪೋಲೀಸರಿಗಾಗಲೀ, ಅಡವೀ ಅಧಿಕಾರಿಗಳಿಗಾಗಲಿ ಬಾಳೆ ಗೊನೆ, ಹಾಲು, ತುಪ್ಪ, ಕೋಳಿ ಮುಂತಾದವುಗಳನ್ನು ಉಚಿತ ವಾಗಿ ಕೊಡುವ ಅವಶ್ಯಕತೆಯಿಲ್ಲವೆಂದು. ರಿಜರ್ವ್ ಮಾಡದೇ ಇರುವ ಅಡವಿಗಳಲ್ಲಿ ಟೀಕು ಜಾತಿಯ ವೃಕ್ಷಗಳನ್ನು ಬಿಟ್ಟು ಬಿಕ್ಕ ಮರಗಳನ್ನು ಕಡೆದುಕೊಳ್ಳಬಹುದೆಂದು ಅಧಿಕಾರಿಗಳು ಅಡ್ಡಿ ಮಾಡಿದರೆ "ರಾಜು ಅವರು ಹೊಡೆದು ಹಾಕೆಂದು ಹೇಳಿದರು"ಎಂದು ನಿರ್ಭಯವಾಗಿ ಹೇಳಿ ರೆಂದು ಭೋಧಿಸಿದನು. "ನಿಮಗೆ ಕೂಲಿ ಕೊಡದೇ ಇದ್ದ ಪಕ್ಷದಲ್ಲಿ ಇಂತಹ ಬಿಟ್ಟಿ ಚಾಕರೀಗೆ ಹೋಗಬಾರದೆಂದು, ಸಹಾಯ ನಿರಾಕರಣೆ ಮಾಡಿ" ಎಂದು ಉದ್ಬೋಧಿಸಿದರು. ಹೀಗಾಗಿ ರಾಜುವಿನ ಪ್ರಭಾವ ದಿಂದ ಅಲ್ಲಿನ ಜನರು ಅಧಿಕಾರಿಗಳ ಮೇಲೆ ಕ್ರಮವಾಗಿ ಎದುರು ತಿರುಗಲಾರಂಭಿಸಿದರು.

ಮನ್ಯದಲ್ಲಿ ಬೆಳೆಯುತ್ತಿದ್ದ ಸೀತಾರಾಮರಾಜನ ಪ್ರಭಾವವನ್ನು ನೋಡಿ ಅಧಿಕಾರಿಗಳು ಅಸೂಯೆ ಪಡುತ್ತಿದ್ದರು. ಹಿಂದಿನಂತೆ ಈಗ ಅಧಿಕಾರಿಗಳು ಅಮಾಯಕ ಜನರನ್ನು ಪೀಡಿಸುವುದನ್ನು ನಿಲ್ಲಿಸಿದರು.

ಲಂಚ ತೆಗೆದುಕೊಳ್ಳುವುದಕ್ಕೂ ಹೆದರಿದರು. ಶ್ರಮಕ್ಕೆ ತಕ್ಕ ಫಲ ಸಿಗುತ್ತಿತ್ತು. ಈಗಂತೂ ಸೀತಾರಾಮರಾಜು ಮನ್ಯವಾಸಿಗಳ ಪಾಲಿನ ದೈವದಂತೆ ಅವರಿಗೆ ಕಂಡುಬರುತ್ತಿದ್ದನು. ಜ್ಞಾನಯೋಗಿಯಾಗಿದ್ದ ರಾಜು ಈಗ ಕರ್ಮಯೋಗಿಯಾಗಿದ್ದನು. ಜನರ ದೃಷ್ಟಿಯಲ್ಲಿ ದೈವ ಸಮಾನನಾದ ರಾಜು ಅಂದಿನ ಸರ್ಕಾರದ ದೃಷ್ಟಿಯಲ್ಲಿ ರಾಜದ್ರೋಹಿ ಎನ್ನಿಸಿಕೊಂಡನು.

ಅಂದು ಮನ್ಯಂಪ್ರಾಂತಕ್ಕೆ (ಚಿಂತಪಲ್ಲಿ ತಾಲೂಕಾ ಗೂಡೆಂ ಪ್ರದೇಶ) ಬ್ಯಾಸ್ಟಿಯನ್ ಎಂಬವನು ತಹಸೀಲ್‌ದಾರ್‌ನಾಗಿದ್ದನು. ಆಂಗ್ಲರ ಪ್ರತಿನಿಧಿಯಾದ ಇವನಿಗೆ ಲಂಚಗುಳಿತನವಿತ್ತು. ಇವನಿಗೆ ರೋಡ್ ಓವರ್ಸೀಯರ್ ಸಂತಾನಂಪಿಳ್ಳೆ ಎಂಬವನು ಜೊತೆಯಾದನು. ಇವರೀರ್ವರು ಮಾಡದಂತಹ ಕೆಟ್ಟ ಕೆಲಸಗಳಿರಲಿಲ್ಲ. ಅಂದಿನ ಬ್ರಿಟೀಷ್ ಸರ್ಕಾರ ನರಸೀಪಟ್ಟಣದಿಂದ 'ಲಂಬಸಿಂಗಿ'ಯ ವರೆಗೆ ರಸ್ತೆ ನಿರ್ಮಿಸಲು ನಿಶ್ಚಯಿಸಿತು. ರಸ್ತೆ ನಿರ್ಮಾಣದ ಕೆಲಸಕ್ಕೆ ಕೂಲಿಯಾಳುಗಳನ್ನು ಹುಡುಕಿ ಆರು ಆಣೆ ದಿನಗೂಲಿ ಕೊಡುವುದಾಗಿ ಆಶೆ ತೋರಿಸಿದ ಬ್ಯಾಸ್ಟಿಯನ್. ಆಸೆಗೆ ಮೈಮರೆತು ಸಾವಿರಾರು ಜನರು ಮೈಮುರಿದು, ಬೆವರುಸುರಿಸಿ ದುಡಿದರು. ಆದರೆ ದಿನಗೂಲಿ ಕೊಡಬೇಕಾಗಿ ಬಂದಾಗ ಮಾತ್ರ ಬ್ಯಾಸ್ಟಿಯನ್ ತಾನು ಹೇಳಿದಂತೆ ಕೂಲಿ ಆರು ಆಣೆ ಕೊಡದೆ ಕೇವಲ ಎರಡೇ ಆಣೆ ಕೊಟ್ಟ. ಎದುರು ತಿರುಗಿದವರನ್ನು ತನ್ನ ಮನೆಗೆ ಕರೆಸಿ ಅವರುಗಳನ್ನು ದಿಗಂಬರರನ್ನಾ ಮಾಡಿ, ಚರ್ಮದ ಚಾಟಿಗಳಿಂದ ಅವರನ್ನು ಹೊಡೆದು, ಚರ್ಮ ಸೀಳಿದ ಕಡೆ ಮೆಣಸಿನ ಪುಡಿಯನ್ನು ಮೆತ್ತುತ್ತಿದ್ದನು. ಈ ಪೈಶಾಚಿಕ ಕೃತ್ಯಗಳನ್ನು ಆ ಜನರು ರಾಜುಗೆ ತಿಳಿಸಿದರು. ರಾಜು ಇವನ ಕಿರಾತಕತನವನ್ನು ಮೇಲಿನ ಅಧಿಕಾರಿಗಳಿಗೆ ತಿಳಿಸಿದನು. ಈತನ ವಿರುದ್ಧ ಬ್ಯಾಸ್ಟಿಯನ್ ಮತ್ತು ಇತರ ಅಧಿಕಾರಿಗಳು ಕಳುಹಿಸಿದ ರಿಪೋರ್ಟ್‌ಗಳನ್ನು ಪರಿಶೀಲಿಸಿ ಮೇಲಿನ ಅಧಿಕಾರಿಗಳು ರಾಜುನನ್ನು ಅನುಮಾನಿಸಿ ಆತನ ಮೇಲೆ

ಸೆಕ್ಯೂರಿಟಿ ಮೊಕದ್ದಮೆ ಹೂಡಿದರು. ರೋಡ್ ರಿಪೇರಿಗಳನ್ನು ಕಾಂಟ್ರಾಕ್ಟ್ ತೆಗೆದುಕೊಂಡ ಪೆದವಲಸ ಪಟೇಲ 'ಎಂಡು ಪಡಾಲು' ನನ್ನು ಬ್ಯಾಸ್ಟಿಯನ್ ಪೋಷಿಸಿಗೊಳಿಸಿದನು. ಅಂತೆಯೇ ಗಂಟಂದೊರ, ಮಲ್ಲು ದೊರಗಳ ಭೂಮಿಗಳನ್ನು ಅಕ್ರಮವಾಗಿ ಸ್ವಾಧೀನಪಡಿಸಿ ಕೊಂಡನು. ಗೂಡೆಂ ಮುಠಾದೊರೆಯಾದ ವೀರಯ್ಯ ದೊರನನ್ನು ಅರೆಸ್ಟ್ ಮಾಡಿಸಿದನು. ಇಂತಹ ಕ್ರೂರವಾದ ಕೆಲಸಗಳಿಂದ ಮನ್ಯ ವಾಸಿಗಳ ಎದೆಗಳಲ್ಲಿ ಬೆಂಕಿ ಹಚ್ಚಿದಂತಾಯಿತು. ಜನರಲ್ಲಿ ಅತೃಪ್ತಿ, ಅಶಾಂತಿ ಹೆಚ್ಚಾಯಿತು. ಅವರ ಸ್ವೇಚ್ಛಾ ಸ್ವಾತಂತ್ರ್ಯಗಳಿಗೆ ರಾಜು ದೀಕ್ಷಾಬದ್ಧನಾದನು. ಅವರಿಗೆ ದೇಶಭಕ್ತಿಯನ್ನು ಬೋಧಿಸಿದನು. ದಬ್ಬಾಳಿಕೆಗಾರರಾದ ಆಂಗ್ಲರನ್ನು ಹೊಡೆದಟ್ಟಬೇಕು, ಸ್ವತಂತ್ರ ಭಾರತ ವನ್ನು ನಿರ್ಮಿಸಬೇಕು ಎಂದು ಪ್ರಬೋಧಿಸಿದನು.

ಸೀತಾರಾಮರಾಜನ ಕಾರ್ಯಕ್ರಮಗಳೆಲ್ಲವೂ ಪೋಲಿಸರಿಗೆ ತಿಳಿದು, ಮೇಲಿನ ಅಧಿಕಾರಿಗಳಿಗೆ ತಿಳಿಸುತ್ತಿದ್ದರು. ಈತನು ಅಲ್ಲಿ ಇದ್ದರೆ ಮನ್ಯಂ ಪ್ರಾಂತದಲ್ಲಿ ಕ್ರಾಂತಿ ಉಂಟಾಗಬಹುದೆಂದು ಈತನ ವಾಸಸ್ಥಾನವನ್ನು ಅಲ್ಲಿಂದ ಬದಲಾಯಿಸಬೇಕೆಂದು ಮೇಲಿನ ಅಧಿಕಾರಿ ಗಳು ನಿಶ್ಚಯಿಸಿದರು. ಇವರ ನಿರ್ಣಯದಂತೆ ರಾಜು ತಾಯಿ, ತಮ್ಮಂದಿರನ್ನು ತುನಿಯಲ್ಲಿರುವ ಅವರ ನೆಂಟರ ಮನೆಗೆ ಕಳುಹಿಸಿ ತಾನು ನರಸೀಪಟ್ನಂಗೆ ಹೊರಟನು. ತಹಸೀಲ್ದಾರ್ ಒಂದು ವಾರದ ಕಾಲ ಮನೆಯಲ್ಲಿಯೇ ನಿರ್ಬಂಧದಲ್ಲಿಟ್ಟನು. ಅಧಿಕಾರಿಗಳು ಎಷ್ಟು ಪ್ರಯತ್ನಪಟ್ಟರೂ ಈತನಿಗೆ ವಿರುದ್ಧವಾಗಿ ಸಾಕ್ಷಿ ಹೇಳಲು ಯಾರೂ ಮುಂದು ಬರಲಿಲ್ಲ. ಮನ್ಯಂ ಜನರ ಕ್ರಾಂತಿಯನ್ನು ತಪ್ಪಿಸಲು ಏಜನ್ಸೀ ಕಮೀಷನರ್ ಈತನ ನಿರ್ಬಂಧವನ್ನೂ ತೊಲಗಿಸಿ ಈತನ ವಾಸಸ್ಥಾನ ವನ್ನು 'ಅಡ್ಡ ತೀಗಲ' ಎಂಬ ಪ್ರದೇಶಕ್ಕೆ ಬದಲಾಯಿಸಿದನು. ಆ ಕಾಲದಲ್ಲಿ ಪೋಲವರಂ ಡಿಪ್ಯುಟಿ ಕಮೀಷನರ್ ಫಜುಲುಲ್ಲಾಖಾನ್. ಈತನು ರಾಜುವಿನ ಚಿಕ್ಕಪ್ಪನಾದ ರಾಮಕೃಷ್ಣಂರಾಜುರವರ ಮಿತ್ರ.

ಈತನು ತಂಬಾ ಒಳ್ಳೆಯುವನು, ದೈವ ಭಕ್ತಿಯುಳ್ಳವನು. ಚಿಕ್ಕಂದಿನಿಂದಲೇ ರಾಜುವಿನ ಆದರ್ಶಗಳನ್ನು ತಿಳಿದಿದ್ದರಿಂದ ಈತನ ಬಗ್ಗೆ ಆದರಾಭಿಮಾನಗಳನ್ನು ತೋರುತ್ತಿದ್ದನು. ಅಡ್ಡತೀಗಲ ತಹಸೀಲ್‌ದಾರ್‌ಗೆ ಹೇಳಿ ಅಡ್ಡಿತೀಗಲಗೆ ನಾಲ್ಕು ಮೈಲಿ ದೂರದಲ್ಲಿದ್ದ 'ಒಡಮೇರು' ತಟದಲ್ಲಿ 'ಪೈಡಿಪುಟ್ಟ' ಎಂಬ ಗ್ರಾಮದಲ್ಲಿ ೩೦ ಎಕರೆ ಜಮೀನನ್ನು ಕೊಡಿಸಿದನು. ರಾಜು ಎರಡು ಗುಡಿಸಲುಗಳನ್ನು ಕಟ್ಟಿಸಿ ತಾಯಿಯನ್ನು ಅಲ್ಲಿಗೆ ಬರಮಾಡಿಕೊಂಡನು. ಆಗ ಅಡ್ಡತೀಗಲ ತಹಸೀಲ್‌ದಾರ್‌ರಾಗಿದ್ದ ಯತಿರಾಜುಲುನಾಯ್ಡು ರಾಜುಗೆ ಬೇಕಾದ ಆಹಾರ ದಿನಸುಗಳನ್ನು ಕಳುಹಿಸುತ್ತಿದ್ದನು. ಎಲ್ಲ ಸದುಪಾಯಗಳನ್ನು ಅಧಿಕಾರಿಗಳು ಕಲ್ಪಿಸುತ್ತಿದ್ದರು. ಆದರೂ ರಾಜುವಿನ ಮೇಲೆ ನಿಗ ತಪ್ಪಲಿಲ್ಲ. ಪೋಲೀಸರ ನಿಗ ತಪ್ಪಿಸಲು ಫಜುಲುಲ್ಲಾಖಾನ್ ರಾಜನನ್ನು ನೇಪಾಳಕ್ಕೆ ಕಳುಹಿಸಬೇಕೆಂದುಕೊಂಡನು. ಇಷ್ಟರಲ್ಲಿಯೇ ಫಜುಲುಲ್ಲಾ ೨೭-೭-೧೯೨೨ರಲ್ಲಿ ಶಿವಮ್ಮಾಪುರಂ ಬಂಗಲೆಯಲ್ಲಿ ಆಕಸ್ಮಿಕವಾಗಿ ಕಣ್ಣುಮುಚ್ಚಿದನು. ಅಂದಿನಿಂದ ಸೀತಾರಾಮರಾಜು ಮನ್ಯಂ ಜನರ ಸಂಕ್ಷೇಮಕ್ಕಾಗಿ, ಬ್ರಿಟಿಷರ ಆಳ್ವಿಕೆಯನ್ನು ಕೊನೆಗೊಳಿಸಲು ಕ್ರಾಂತಿಗಾಗಿ ಸಕ್ರಿಯವಾಗಿ ಸಿದ್ಧನಾದ. ೧೯೨೨ ಆಗಸ್ಟ್ ತಿಂಗಳಲ್ಲಿ ಚಿಂತಪಲ್ಲಿ ಪೋಲೀಸ್ ಠಾಣೆಯ ಮೇಲೆ ದಾಳಿ ಮಾಡುವುದರೊಂದಿಗೆ ಕ್ರಾಂತಿಯ ಶುಭಾರಂಭ ಮಾಡಿದನು. ಈ ಕ್ರಾಂತಿಯ ಆರಂಭದಲ್ಲೇ ರಾಜು ತಾಯಿಯನ್ನು, ತಮ್ಮನನ್ನು ನರಸಾಪುರಂಗೆ ಕಳುಹಿಸಿದನು.

ಮನ್ಯ ಪ್ರದೇಶಕ್ಕೆ ಈತನು ರಾಜನಾಗಬೇಕೆಂಬ ಆಕಾಂಕ್ಷೆ, ಅದಕ್ಕಾಗಿ ಇಂತಹ ಹೋರಾಟವನ್ನು ಕೈಗೊಂಡಿರುವನೆಂದು ಏಜನ್ಸೀ ಕಮೀಷನರ್ ಹೇಪ್ಪೆಲ್ ಸರ್ಕಾರಕ್ಕೆ ತಿಳುಹಿಸಿದನು. ಆದರೆ ರಾಜುವಿಗೆ ಇಂತಹ ಸ್ವಲಾಭ-ಅಪೇಕ್ಷೆ ಇರಲಿಲ್ಲ. ಇದನ್ನು ಅರಿತ ಮನ್ಯ ಜನರು ಕ್ರಾಂತಿವೀರರಾಗಿ ಧೈರ್ಯ ಸಾಹಸಗಳೊಂದಿಗೆ ರಾಜುವನ್ನು ಅನುಸರಿಸಿದರು. ತಾನು ಸಾಧಿಸಬೇಕಾದ ಮನ್ಯಪ್ರದೇಶ ಸ್ವಾತಂತ್ರ್ಯವು

ನಮ್ಮ ದೇಶ ಸ್ವಾತಂತ್ರ್ಯಕ್ಕೆ ಮಾರ್ಗದರ್ಶಕವಾಗಬೇಕೆಂಬುದು ರಾಜುವಿನ ಬಯಕೆಯಾಗಿತ್ತು.

ಸೀತಾರಾಮರಾಜನಿಗೆ ಯೋಧರಾದ ಸಹಚರರಿಗೆ ಕಡಿಮೆಯಿರಲಿಲ್ಲ. ಅಂತಹವರಲ್ಲಿ ಗಾಂ ಸೋದರರಾಗಿ ಹೆಸರುಗಳಿಸಿದ ಗಂಟಂದೊರ, ಮಲ್ಲುದೊರ, ಗೂಡೆಂ ಮುಠಾದಾರನಾದ ಮೊಟ್ಟಡಂ ವೀರಯ್ಯದೊರ, ಪೆದವಲಸ ಗ್ರಾಮ ಮುನ್ಸಿಫ್ ಆದ ಎಂಡುಪಡಲು ಮುಂತಾದವರಲ್ಲದೇ, 'ಅಗ್ಗಿರಾಜು' ಎಂದು ಹೆಸರು ಪಡೆದ ವೇಗಿರಾಜು ಸತ್ಯನಾರಾಯಣರಾಜು (ಸತ್ತಿರಾಜು) ರವರು ಸೀತಾರಾಮರಾಜು ನಡೆಸಿದ ಈ ಮಹಾಕ್ರಾಂತಿಗೆ ಪಂಚ ಪ್ರಾಣಗಳಂತೆ ಇದ್ದರು. ಇವರನ್ನು ಮಹಾವೀರರನ್ನಾಗಿ ಮಾಡಿ ಬ್ರಿಟಿಷರ ಅಧಿಪತ್ಯವನ್ನು ಅಂತ್ಯ ಮಾಡಲು ಕ್ರಾಂತಿ ಸಮರಕ್ಕೆ ಸನ್ನದ್ಧನಾದನು. ಈತನ ನೇತೃತ್ವದಲ್ಲಿ ೧೫೦ ಜನ ಮುಖ್ಯ ಕ್ರಾಂತಿಕಾರರಿದ್ದರು. ಇವರೆಲ್ಲರಿಗೂ ಸರ್ವ ಸೈನಾಧ್ಯಕ್ಷನಾಗಿದ್ದು ತಕ್ಕ ಶಿಕ್ಷಣಕೊಟ್ಟು ಕ್ರಮಶಿಕ್ಷಣವುಳ್ಳ ಮಹಾವೀರರನ್ನಾಗಿ ತಯಾರು ಮಾಡಿದನು. ಇವರು ಬಿಳಿ ಮತ್ತು ಕೆಂಪು ನಿಕ್ಕರುಗಳನ್ನು, ಅಂಗಿಗಳನ್ನು ಧರಿಸುತ್ತಿದ್ದರು. ಲಕ್ಷ್ಯದ ಸಾಧನೆಗಾಗಿ ರಾತ್ರಿ ಸಮಯಗಳಲ್ಲಿ ರಾಜು ಮತ್ತು ಅವರ ಅನುಚರರು ಭಯಂಕರವಾದ ಅರಣ್ಯಗಳಲ್ಲಿ ತಿರುಗುತ್ತಿದ್ದರು. ಕೆಲವರು ಪತ್ತೇದಾರರಾಗಿ ಶತ್ರು ಸಮಾಚಾರಗಳನ್ನು ತರುತ್ತಿದ್ದರು.

ವ್ಯೂಹ ರಚನೆಯಲ್ಲಿ, ರಾಜ ನೀತಿಯಲ್ಲಿ ರಾಜುವಿಗೆ ಇರುವ ಚಾತುರ್ಯವು ಅಸಮಾನವಾದುದು. ಗೊರಿಲ್ಲಾ ಯುದ್ಧ ತಂತ್ರದಲ್ಲಿ, ಕತ್ತಿಯುದ್ಧದಲ್ಲಿ, ಬಂದೂಕು ಹೋರಾಟದಲ್ಲಿ ಅಪೂರ್ವ ಚಾತುರ್ಯವನ್ನು ತೋರಿಸುವ ಸಾಹಸಿಯಾಗಿದ್ದನು ರಾಜು.

ಗಂಟಂದೊರ, ಮಲ್ಲುದೊರ ಮುಂತಾದ ನಾಯಕರೊಂದಿಗೆ ಚರ್ಚಿಸಿ ಕ್ರಾಂತಿಯ ಆರಂಭಕ್ಕೆ ಮುಹೂರ್ತವನ್ನು ನಿರ್ಣಯಿಸಿದನು ರಾಜು. ೧೯-೮-೧೯೨೨ರಲ್ಲಿ ಮಹಾರುದ್ರಾಭಿಷೇಕ ಮಾಡಿ ಚಿಂತಪಲ್ಲಿ

ಪೋಲೀಸ್ ಠಾಣೆಯ ಮೇಲೆ ದಾಳಿ ಮಾಡಲು ನಿಶ್ಚಯಿಸಿದನು. ೨೨-೮-೧೯೨೨ರಲ್ಲಿ ಮನ್ಯಂಕ್ರಾಂತಿ ಆರಂಭವಾಯಿತು. 'ಸ್ವರಾಜ್ಯವು ನನ್ನ ಜನ್ಮ ಹಕ್ಕು' ಎಂದು ಗರ್ಜಿಸಿದ ಲೋಕಮಾನ್ಯ ಬಾಲ ಗಂಗಾಧರ ತಿಲಕ್‌ರಂತೆ 'ಕ್ರಾಂತಿ ನನ್ನ ಜನ್ಮ ಹಕ್ಕು' ಎಂದು ಘೋಷಿಸಿದ ಕ್ರಾಂತಿಕಾರ ಅಲ್ಲೂರಿ ಸೀತಾರಾಮರಾಜು. ತಾವು ಬರುವ ಸಮಯವನ್ನು ತಿಳಿಸುತ್ತಾ ಒಂದು ಚೀಟಿಯಲ್ಲಿ ಬರೆದು, ಅದನ್ನು ಒಂದು ಮೆಣಸಿನ ಕಾಯಿಯೊಂದಿಗೆ ಬಾಣಕ್ಕೆ ಕಟ್ಟಿ ಅದು ತಲುಪಬೇಕಾದ ಸ್ಥಳಕ್ಕೆ ಕ್ರಾಂತಿಕಾರರು ಕಳುಹಿಸುತ್ತಿದ್ದರು. ಅದು ಎಲ್ಲಿಂದ ಹೇಗೆ ಬಂತೋ ತಿಳಿಯದೆ ಅಧಿಕಾರಿಗಳು ಆಶ್ಚರ್ಯಪಡುತ್ತಿದ್ದರು. ಇದೇ ಸೀತಾರಾಮರಾಜು 'ಮಿರಪಕಾಯ ಟಪಾ' (ಮೆಣಸಿನಕಾಯಿ ಟಪಾಲ್) ಎಂದು ಪ್ರಸಿದ್ಧಿಯಾಯಿತು.

ಅಧ್ಯಾಯ ೫

ಪೊಲೀಸ್ ಠಾಣೆಗಳ ಮೇಲೆ ದಾಳಿ

ಆಂಗ್ಲ ಸರ್ಕಾರದ ಶಕ್ತಿಯನ್ನು ಎದುರಿಸಿ ಹೋರಾಡಲು ಬೇಕಾದ ಬಂದೂಕುಗಳಂತಹ ಆಧುನಿಕ ಆಯುಧಗಳನ್ನು ಸಂಗ್ರಹಿಸಲು ಸೀತಾರಾಮರಾಜು ಯೋಜಿಸಿದನು. ಪೊಲೀಸ್ ಠಾಣೆಗಳ ಮೇಲೇ ದಾಳಿ ಮಾಡಿ ಶಸ್ತ್ರಗಳನ್ನು ಹೊತ್ತುತರುವುದನ್ನು ಬಿಟ್ಟು ಬೇರೆ ದಾರಿಯೇ ಇಲ್ಲದಿದ್ದರಿಂದ ಅವರು ಅಂತಹ ಸಾಹಸ ಕಾರ್ಯಗಳಿಗೆ ಮುಂದಾದರು.

೨೨-೮-೧೯೨೨ರಲ್ಲಿ ಮೊಟ್ಟಮೊದಲನೆಯ ಬಾರಿ ಸೀತಾರಾಮರಾಜು ೩೦೦ ಜನ ಕ್ರಾಂತಿಕಾರರೊಂದಿಗೆ ರಂಪಚೋಡವರಂ ಏಜನ್ಸಿಯಲ್ಲಿದ್ದ ಚಿಂತಪಲ್ಲಿ ಪೊಲೀಸ್ ಠಾಣೆಯ ಮೇಲೆ ದಾಳಿಮಾಡಿದ. ಆ ಸಮಯದಲ್ಲಿ ಸಬ್ ಇನ್‌ಸ್ಪೆಕ್ಟರ್ ಅಲ್ಲಿ ಇರಲಿಲ್ಲ. ಅಲ್ಲಿದ್ದ ಪೊಲೀಸರನ್ನು ಒಂದು ಕಂಬಕ್ಕೆ ಕಟ್ಟಿ ಹಾಕಿ, ಶಸ್ತ್ರಾಗಾರದಲ್ಲಿದ್ದ ೧೧ ಬಂದೂಕುಗಳು, ೧೩೯೦ ಸುತ್ತು ಗುಂಡುಗಳು, ೧೪ ಬಯೋನೆಟ್ಟುಗಳು, ೫ ಕತ್ತಿಗಳನ್ನು ದೋಚಿಕೊಂಡನು. ಈ ಆಯುಧಗಳ ಪಟ್ಟಿಯನ್ನು ಆ ಠಾಣೆಯ ಡೈರಿಯಲ್ಲಿ ಬರೆದು ಇಂಗ್ಲೀಷ್‌ನಲ್ಲಿ ಸಹಿ ಮಾಡಿದನು ಸೀತಾರಾಮರಾಜು. ಇದು ರಾಜನ ಮೊದಲನೆಯ ವಿಜಯ.

ಮರುದಿನವೂ ಮುನ್ಸೂಚನೆಯನ್ನು ಕಳುಹಿಸಿ ಕೃಷ್ಣಾದೇವಿ ಪೇಟೆಯ ಠಾಣೆಯ ಮೇಲೆ ದಾಳಿಮಾಡಿದ ರಾಜು. ಆತನು ಅಲ್ಲಿ ಹೋಗುವುದಕ್ಕಿಂತಲೂ ಮುಂಚೆಯೇ, ಠಾಣೆಯನ್ನು ಇದ್ದ ಹಾಗೆಯೇ ಬಿಟ್ಟುಕೊಟ್ಟು ಪೊಲೀಸರು ಪರಾರಿಯಾಗಿದ್ದರು. ಏಳು ಬಂದೂಕು ಗಳು, ಸ್ವಲ್ಪ ಮಾತ್ರವೇ ಸುತ್ತು ಗುಂಡುಗಳು ದೊರಕಿದವು. ಇದು ರಾಜನ ಎರಡನೆಯ ಗೆಲುವು.

ಆಗಸ್ಟ್ ೨೪ನೆಯ ತಾರೀಖು ಅರ್ಧರಾತ್ರಿಯ ಸಮಯದಲ್ಲಿ ಕ್ರಾಂತಿಕಾರರು ರಾಜವೊಮ್ಮಂಗಿ ಪೊಲೀಸ್ ಠಾಣೆಯ ಮೇಲೆ ದಾಳಿ ನಡೆಸಿದರು. ಈ ದಾಳಿಯ ಸಮಯದಲ್ಲಿ ಇಬ್ಬರು ಹೆಡ್ ಕಾನಿಸ್ಟೇ ಬಲ್ಸ್ ಮತ್ತು ಆರುಜನ ಪೋಲೀಸ್ ಮಾತ್ರ ಇದ್ದರು. ಇಲ್ಲಿ ಇವರಿಗೆ ೮ ಬಂದೂಕುಗಳು, ೮೨೫ ಮದ್ದು ಗುಂಡುಗಳು, ಪೊಲೀಸ್ ಯೂನೀಫಾರಮ್‌ಗಳು ದೊರೆತವು. ಶಸ್ತ್ರಗಳ ಸಂಗ್ರಹಣದೊಂದಿಗೆ ಅದುವರೆಗೆ ಬಂಧಿಸಲ್ಪಟ್ಟಿದ್ದ ಮೆಟ್ಟಡಂ ವೀರಯ್ಯ ಎಂಬುವರನ್ನು ಬಂಧನದಿಂದ ವಿಮುಕ್ತಿಗೊಳಿಸುವುದು ಕೂಡ ಈ ದಾಳಿಯ ಮುಖ್ಯ ಕಾರಣವಾಗಿತ್ತು. ವೀರಯ್ಯನನ್ನು ಬಂಧ ವಿಮುಕ್ತನನ್ನಾಗಿ ಮಾಡಿ, ಕಛೇರಿಯ ದಾಖಲೆ ಪುಸ್ತಕದಲ್ಲಿ ಮೇಲೆ ಹೇಳಿದ ಶಸ್ತ್ರಗಳನ್ನು ತಾನು ತೆಗೆದುಕೊಂಡಂತೆ ನಮೂದಿಸಿದನು ರಾಜು. ಅಂದಿನಿಂದ ವೀರಯ್ಯನು ಗಾಂ ಸೋದರರೊಂದಿಗೆ ರಾಜನಿಗೆ ಮುಖ್ಯ ಅನುಚರನಾಗಿ ರಾಜುವಿನ ಕ್ರಾಂತಿ ಸೇನೆಗೆ ಬಹು ಮುಖ್ಯ ನಾಯಕನಾದ.

ಹೀಗೆ ಕ್ರಮವಾಗಿ ಮೂರು ದಿನಗಳಲ್ಲಿ ಮೂರು ಠಾಣೆಗಳ ಮೇಲೆ ದಾಳಿ ನಡೆಸಿ ವಿಜಯವನ್ನು ಸಂಪಾದಿಸಿದ ಕೂಡಲೇ ಕ್ರಾಂತಿ ಕಾರರು ಗೂಡೆಂ ಗುಡ್ಡಗಳಲ್ಲಿ ಹಬ್ಬ ಮಾಡಿಕೊಂಡರು. ಈ ದಾಳಿಯ ಸುದ್ದಿ ಕೇಳಿದಾಕ್ಷಣವೇ ಏಜನ್ಸಿ ಜಿಲ್ಲಾ ಸೂಪರಿಂಟೆಂಡೆಂಟ್ ಸಾಂಡರ್ಸ್, ವಿಶಾಖಪಟ್ಟಣಂ ಸೂಪರಿಂಟೆಂಡೆಂಟ್ ಮಾರ್ಟಿನ್, ಏಜನ್ಸೀ ಕಮೀಷ ನರ್ ಸ್ಟೀವರ್ಟ್ ೨೫ನೆಯ ತಾರೀಖು ನರಸೀಪಟ್ಟಣಂಗೆ ಬಂದರು.

ರಾಜಮಂಡ್ರಿ, ವಿಶಾಖಪಟ್ಟಣಂ, ಪಾರ್ವತೀಪುರಂ ಕೇಂದ್ರಗಳಿಂದ ರಿಜರ್ವ್ ಪೋಲೀಸರನ್ನು ಕರೆಸಿದರು. ಡಾಸೆನ್ ಚಾಡ್ವಿಕ್, ಟ್ರೇಮೆನ್ ಹೀರ್, ಫೋರ್ಬೆಸ್, ಹೈಬರ್, ಹ್ಯೂಮರ್ ಮುಂತಾದ ಅಧಿಕಾರಿಗಳು ಹೆಚ್ಚುವರಿ ಪೋಲೀಸರ ಬಳಗದೊಂದಿಗೆ ಮನ್ಯಂ ಪ್ರವೇಶಿಸಿ ಕ್ರಾಂತಿಕಾರರಿಗಾಗಿ ಹುಡುಕಲಾರಂಭಿಸಿದರು. ಹೇಗಾದರೂ ಮಾಡಿ ಈ ಕ್ರಾಂತಿಯನ್ನು ಅಡಗಿಸಬೇಕೆಂದು ಈ ಅಧಿಕಾರಿಗಳು ಪ್ರಯತ್ನ ಪಟ್ಟರು.

ಕ್ರಾಂತಿಕಾರರು ಗೂಡೆಂ ಗುಡ್ಡಗಳಲ್ಲಿದ್ದ 'ಕಿಲ್ಲಂಕೋಟೆ'ಯ ಮೇಲೆ 'ಗಂಗರಾಜುಲಮಡುವು' ತಲುಪಿದರು. ಮಳೆಗಾಲದಲ್ಲಿ ನೆನೆದ ಕಾರಣದಿಂದ, ಹಾಗೂ ಬಿಡುವಿಲ್ಲದೇ ಪ್ರಯಾಣ ಮಾಡುವುದರಿಂದಲೂ ಕ್ರಾಂತಿಕಾರರಲ್ಲಿ ಹಲವಾರು ಜನ ಅಸ್ವಸ್ಥರಾದರು. ಆದ್ದರಿಂದ ತಮ್ಮ ಸೈನ್ಯದಲ್ಲಿ ಇನ್ನೂ ಕೆಲವು ಹೊಸಬರನ್ನು ಸೇರಿಸಿಕೊಂಡರು. ಸರ್ಕಾರದ ಅಧಿಕಾರಿಗಳು ಕ್ರಾಂತಿಕಾರರನ್ನು ಹಿಡಿಯಲು ಸಂಚು ಮಾಡಿದರು. ಕ್ರಾಂತಿಕಾರರು ಕಿಲ್ಲಂಕೋಟೆಯ ಮೇಲೆ ಕೊಂಡಕಂಬೇರು ಕಡೆ ಹೋಗುತ್ತಿದ್ದಾರೆಂದು ಅಧಿಕಾರಿಗಳಿಗೆ ಸೆಪ್ಟೆಂಬರ್ ಎರಡನೆಯ ತಾರೀಖು ತಿಳಿದು ಬಂದಿತು. ಟ್ರೇಮನ್ ಹೀರ್ ನೇತೃತ್ವದಲ್ಲಿ ೩೦ ಜನ ರಿಜರ್ವ್ ಪೋಲೀಸರು, ಬ್ಯಾಸ್ಟಿಯನ್ ಮತ್ತು ಒಬ್ಬ ಡಾಕ್ಟರ್ ಪೋಲೀಸ್ ಬಳಗದೊಂದಿಗೆ ಕ್ರಾಂತಿಕಾರರನ್ನು ಎದುರಿಸಲು ಸೆಪ್ಟೆಂಬರ್ ೩ನೆಯ ತಾರೀಖು ಒಂಗೇರಿ ಘಟ್ಟಗಳ ರಸ್ತೆಯಲ್ಲಿ ಪ್ರಯಾಣ ಮಾಡುತ್ತಿದ್ದರು. ಸೀತಾರಾಮರಾಜನ ಆಜ್ಞೆಯನ್ನು ಪಡೆದು ಕ್ರಾಂತಿಕಾರರು ಪೋಲೀಸರ ಮೇಲೆ ಗುಂಡು ಹಾರಿಸಿದರು. ಪೊಲೀಸರು ಇವರ ಮೇಲೆ ಎದುರು ದಾಳಿ ಮಾಡಿದರು. ಬ್ಯಾಸ್ಟಿಯನ್, ಡಾಕ್ಟರ್ ಮತ್ತು ಪೋಲೀಸರಲ್ಲಿ ಕೆಲವರು ಪಲಾಯನ ಮಾಡಿದರು. ಟ್ರೇಮನ್ ಹೀರ್ ಈ ಹೋರಾಟದಲ್ಲಿ ತೀವ್ರವಾಗಿ ಪೆಟ್ಟುತಿಂದು ಚಿಂತಾಜನಕ ಸ್ಥಿತಿಯಲ್ಲಿ ಆಸ್ಪತ್ರೆಗೆ ದಾಖಲಾದ. ಹೀಗೆ ಈ ಹೋರಾಟವು ಕೊನೆಗಾಣಿತು. ಈ

ಹೋರಾಟದಲ್ಲಿಯೂ ಸೀತಾರಾಮರಾಜನಿಗೆ ಜಯವಾಯಿತು. ಸೆಪ್ಟೆಂಬರ್ ೨೧ನೆಯ ತಾರೀಖು ಹುಣ್ಣಿಮೆಯ ದಿನ ಗೂಡೆಂ ಹತ್ತಿರವಿದ್ದ 'ಗಾಲಿಕೊಂಡ' ಮೇಲೆ ರಾಜು ತನ್ನ ಅನುಚರರೊಂದಿಗೆ ಕಾಳೀ ಮಾತೆಯ ಪೂಜೆ ಮಾಡಲು ನಿಶ್ಚಯಿಸಿದನು. ಈ ಸುದ್ದಿಯೊಂದಿಗೆ ಮನ್ಯ ಪ್ರಾಂತದಲ್ಲಿ ಆನಂದೋತ್ಸಾಹಗಳು ಹೆಚ್ಚಾದವು. ಈ ವಿಜಯೋತ್ಸವವನ್ನು ಭಗ್ನಗೊಳಿಸಲು ಸಾಂಡರ್ಸ್, ಟಾಲ್‌ಬಟ್ ಮುಂತಾದ ಅಧಿಕಾರಿಗಳು ಯತ್ನಿಸಿದರಾದರೂ ಗೊರಿಲ್ಲಾ ಯುದ್ಧದಲ್ಲಿ ಚತುರನಾದ ಸೀತಾರಾಮರಾಜನ ಯುಕ್ತಿಗಳಿಗೆ ಈ ಯತ್ನವು ವಿಫಲವಾಯಿತು. ಈ ವಿಜಯೋತ್ಸಾಹದೊಂದಿಗೆ ಸೀತಾರಾಮರಾಜನು ಅಂದುಕೊಂಡಂತೆ ೨೧-೯-೧೯೨೨ರಲ್ಲಿ ವೈಭವಪೂರ್ಣವಾಗಿ ಕಾಳೀ ಮಾತೆಯ ಪೂಜೆಯನ್ನೂ ಮಾಡಿದನು.

ಇನ್ನೊಮ್ಮೆ (ಸೆಪ್ಟೆಂಬರ್ ೨೪) ಸೀತಾರಾಮರಾಜನ ಅನುಚರರು ಆಹಾರ ಪದಾರ್ಥಗಳಿಗಾಗಿ 'ದಾಮನಪಲ್ಲಿ' ಗ್ರಾಮದಲ್ಲಿ ತಂಗಿದ್ದರು. ಈ ಸುದ್ದಿ ತಿಳಿದು ಬ್ರಿಟಿಷ್ ಸೈನಿಕರು ಅಲ್ಲಿಗೆ ಬಂದರು. ರಾಜುವಿನ ಸೈನ್ಯ ಅವರ ಮೇಲೆರಗಿತು. ಆಂಗ್ಲ ಸೈನ್ಯಕ್ಕೆ ನೇತೃತ್ವ ವಹಿಸಿದ್ದ ಸ್ಕಾಟ್ ಕವರ್ಡ್, ಹೈಟರ್ ಎಂಬ ಅಸಿಸ್ಟೆಂಟ್ ಸೂಪರಿಂಟೆಂಡೆಂಟರು ಈ ಹೋರಾಟದಲ್ಲಿ ಸತ್ತರು. ಇವರ ಹೆಣಗಳನ್ನು ಪಡೆದುಕೊಳ್ಳಲು ಪೋಲೀಸರಿಗೆ ರಾಜು ಹೇಳಿದಷ್ಟು ಶುಲ್ಕ ಕೊಡಬೇಕಾಯಿತು. ಈ ಹೋರಾಟದಲ್ಲಿಯೂ ಸಾಕಷ್ಟು ಬಂದೂಕುಗಳು, ಮದ್ದು ಗುಂಡುಗಳು ದೊರೆತವು.

ಅಕ್ಟೋಬರ್ ೧೫ನೆಯ ತಾರೀಖು ರಾತ್ರಿ ಹತ್ತು ಘಂಟೆಗೆ ಅಡ್ಡತೀಗಲ' ಪೋಲೀಸ್ ಠಾಣೆಯಮೇಲೆ ಕ್ರಾಂತಿಕಾರರು ದಾಳಿಮಾಡಿದರು. ಪೋಲೀಸರು ಹೆದರಿ ಓಡಿಹೋದರು. ನಂತರ ಅಕ್ಟೋಬರ್ ೧೯ನೆಯ ತಾರೀಖು ಸಾಯಂಕಾಲ ೪ ಘಂಟೆಗೆ ಕ್ರಾಂತಿಕಾರರು ರಂಪಚೋಡವರಂ ತಲುಪಿ ತಾಲ್ಲೂಕು ಕಛೇರಿಯ ಬಳಿ ಬಂದು ಬಂದೂಕು

ಗಳನ್ನು ಹಾರಿಸಿದರು. ಅಲ್ಲಿದ್ದ ಜಾನ್ ಸೇನಾನಿ ಸೈನಿಕರೊಂದಿಗೆ ಓಡಿ ಹೋದನು. ರಾಜನ ಕ್ರಾಂತಿ ಶಕ್ತಿಗೆ ಅಲ್ಲಿದ್ದ ಜನರು ಜಯಕಾರ ಮಾಡಿದರು. ಈ ಸಂದರ್ಭದಲ್ಲಿ ರಾಜು ರಂಪಚೋಡವರಂ ತಹಸೀಲ್ ದಾರರನ್ನು ತನ್ನ ಬಳಿ ಕರೆಸಿಕೊಂಡು ಮಾಡಿದ ರಾಜಕೀಯ ಸಂಭಾಷಣೆ ಅತ್ಯಂತ ಪ್ರಧಾನವಾದದ್ದು. 'ನನಗೆ ಕೇವಲ ಬ್ರಿಟಿಷರನ್ನು ಕೊಲ್ಲ ಬೇಕೆನಿಸಿವರೂ, ಭಾರತೀಯ ಸೈನಿಕರೂ ಅವರೊಂದಿಗೆ ಸೇರಿಕೊಂಡಿರು ವುದರಿಂದ ಹಾಗೆ ಮಾಡುವುದು ಕಷ್ಟವಾಗಿದೆ' ಎಂದು ತನ್ನ ವಿಚಾರ ವನ್ನು ತಿಳಿಸಿದನು. ಈ ವಿಜಯದೊಂದಿಗೆ ರಾಜುವಿನ ಪ್ರಾಬಲ್ಯವು ಹೆಚ್ಚಿತು. ರಾಜುವಿನ ಯುದ್ಧ ತಂತ್ರಕ್ಕೆ ಬ್ರಿಟಿಷರು ಆಶ್ಚರ್ಯ ಪಟ್ಟರು. ತಾನು ಮಾಡಬಹುದಾದ ದಾಳಿಯನ್ನು ಕುರಿತು ಅಧಿಕಾರಿ ಗಳಿಗೆ ಮುಂಚೆಯೇ ತಿಳಿಸಿ, ಜ್ಯೋತಿಶಾಸ್ತ್ರದ ರೀತಿಯಲ್ಲಿ ಇಟ್ಟ ಮುಹೂರ್ತದಲ್ಲಿಯೇ ಆ ದಾಳಿಯನ್ನು ನಿರ್ವಹಿಸಿ ವಿಜಯವನ್ನು ಸಾಧಿಸುವುದು ರಾಜುವಿನ ತಂತ್ರದ ವಿಶೇಷ. ಸುಶಿಕ್ಷಿತರಾದ ಪತ್ತೆದಾರ ರಿಂದ ಬ್ರಿಟಿಷರ ವ್ಯೂಹಗಳನ್ನು ತಿಳಿದುಕೊಂಡು, ಅವರನ್ನೇ ತಪ್ಪು ದಾರಿ ಹಿಡಿಸುತ್ತಿದ್ದನು. ರಾಜುವಿನ ಇಂತಹ ಚಾಣಕ್ಷ ತಂತ್ರವನ್ನು ಕುರಿತು ಅಧಿಕಾರಿಗಳು ಸರ್ಕಾರಕ್ಕೆ ವಿಪುಲವಾದ ನಿವೇದನೆಯನ್ನು ಕಳುಹಿಸಿದರು.

ಕ್ರಾಂತಿಕಾರರು ರಂಪಚೋಡವರಂನಿಂದ ರಾಮವರಂಗೆ ಬಂದರು. ಅದನ್ನು ತಿಳಿದು ಸಾಂಡರ್ಸ್ ಇವರ ಮೇಲೆ ಹೋರಾಟ ನಡೆಸಲು ಎರಡು ಯತ್ನಿಸಿದರೂ ಕ್ರಾಂತಿಕಾರರು ಸರ್ಕಾರೀ ಸೈನ್ಯಗಳ ಮೇಲೆ ಗುಂಡು ಹಾರಿಸಿದರು. ಪರಿಸ್ಥಿತಿ ಅನುಕೂಲವಿಲ್ಲವೆಂದು ತಿಳಿದು ಸಾಂಡರ್ಸ್ ಸೈನಿಕರೊಂದಿಗೆ ಹಿಂತಿರುಗಿದನು.

ಅಧ್ಯಾಯ ೬

ಮೊದಲ ಬಾರಿಗೆ ಸೋಲು

ಸೀತಾರಾಮರಾಜನನ್ನು ಆಕಸ್ಮಿಕವಾಗಿ ಎದುರಿಸಿ ಹಿಡಿದುಕೊಳ್ಳಲು ಆಂಗ್ಲ ಅಧಿಕಾರಿಗಳು ನಿಶ್ಚಯಿಸಿದರು. ಕ್ರಾಂತಿಕಾರರು ಪೆದಗಡ್ಡಪಾಲೆಂ ಎಂಬ ಪ್ರದೇಶದಲ್ಲಿ ತಂಗಿದ್ದಾರೆಂಬ ಸುದ್ದಿಯನ್ನು ಡಿಸೆಂಬರ್ ೬ನೆಯ ತಾರೀಖು ಆಂಗ್ಲ ಸೈನ್ಯವು ಜಾನ್ ಚಾರ್ಸೀ ಮುಂತಾದ ಅಧಿಕಾರಿಗಳೊಂದಿಗೆ ಅವರ ಬೆನ್ನಟ್ಟಿತು. ಈ ಕ್ರಾಂತಿಕಾರರು ಹೊಲಗದ್ದೆಗಳಲ್ಲಿ ಬಚ್ಚಿಟ್ಟುಕೊಂಡು ಅವರ ಮೇಲೆ ಹಠಾತ್ತಾಗಿ ಗುಂಡು ಹಾರಿಸಿದರು. ಸರ್ಕಾರಿ ಸೈನ್ಯವು ಇವರ ಮೇಲೆ ಗುಂಡು ಹಾರಿಸಿತು. ಕ್ರಾಂತಿಕಾರರು ತಮ್ಮನ್ನು ನಾಲ್ಕು ಭಾಗಗಳಾಗಿ ವಿಭಾಗಿಸಿಕೊಂಡು ನಾಲ್ಕು ಕಡೆಗಳಿಂದಲೂ ಆಂಗ್ಲ ಸೈನ್ಯದ ಮೇಲೆ ಗುಂಡು ಹಾರಿಸಿದರು. ಆಂಗ್ಲ ಸೈನಿಕರು ಫಿರಂಗಿಗಳಿಂದ ಅಗ್ನಿಗೋಳಗಳನ್ನು ಕ್ರಾಂತಿಕಾರರ ಮೇಲೆ ಹಾರಿಸಿದರು. ಆ ಯುದ್ಧದಲ್ಲಿ ನಾಲ್ಕು ಜನ ವೀರರು ಮೃತಪಟ್ಟರು. ಒಬ್ಬನು ಅವರಿಗೆ ಸಿಕ್ಕಿದನು. ಕೆಲವರಿಗೆ ಗಾಯಗಳಾದವು. ಒಂದು ಆಟೋಮ್ಯಾಟಿಕ್ ಪಿಸ್ಟಲ್, ಎರಡು ಬಂದೂಕುಗಳು, ಮದ್ದುಗುಂಡು, ಸೀತಾರಾಮರಾಜನ ಕೈಚೀಲ ಸರ್ಕಾರೀ ಸೈನಿಕರಿಗೆ ಸಿಕ್ಕಿಬಿದ್ದವು. ನಂತರ ಸ್ಪಿನೀ ಎಂಬಾತನು ಕ್ರಾಂತಿಕಾರರನ್ನು ಹಿಡಿಯಲು ಸೈನಿಕರೊಂದಿಗೆ ಲಾರಿಗಳಲ್ಲಿ ಹೊರಟನು,

ಭಯಂಕರಾರಣ್ಯದಲ್ಲಿ ರಾತ್ರಿಯ ಸಮಯದಲ್ಲಿ ಕ್ರಾಂತಿಕಾರರ ಸ್ಥಾವರವನ್ನು ಕಂಡು ಹಿಡಿದು ಅವರ ಮೇಲೆ ಗುಂಡು ಹಾರಿಸಿದನು. ಕ್ರಾಂತಿಕಾರರು ಎದುರು ದಾಳಿ ಮಾಡಿದರು. ಹೀಗೆ ಒಂದು ಘಂಟೆಯ ಕಾಲ ಯುದ್ಧವು ಭಯಂಕರವಾಗಿ ನಡೆಯಿತು. ಫಿರಂಗಿಗಳ ಬೆಂಕಿಯ ಮಳೆಗೆ ಕ್ರಾಂತಿಕಾರರು ನಿಲ್ಲಲಾಗಲಿಲ್ಲ. ಮದ್ದುಗುಂಡುಗಳ ಹೊಡೆತಗಳಿಗೆ ಸೀತಾರಾಮರಾಜನ ಹಾಸಿಗೆಯೂ ಹಾಳಾಯಿತು. ಈ ಸಂಗ್ರಾಮದಲ್ಲಿ ಎಂಟು ಜನ ಕ್ರಾಂತಿಕಾರರು ಪ್ರಾಣತ್ಯಾಗ ಮಾಡಿದರು. ಹಲವಾರು ಜನ ಗಾಯಗೊಂಡರು. ೨ ಬಂದೂಕುಗಳು, ೩೦೩ ಬಂದೂಕುಗಳು ಎರಡು, ೯೧೦ ಮದ್ದುಗುಂಡುಗಳು, ೧೪ ಬಯೋನೆಟ್ಟುಗಳು, ೬ ಕತ್ತಿಗಳು, ಒಂದು ಆಟೋಮ್ಯಾಟಿಕ್ ಪಿಸ್ಟಲ್ ಆಂಗ್ಲ ಸೈನಿಕರಿಗೆ ದೊರೆತವು. ಇಷ್ಟು ದಿವಸ ದಿಗ್ವಿಜಯ ಗಳಿಸುತ್ತಿದ್ದ ರಾಜುವಿಗೆ ಇದು ಮೊದಲನೆಯ ಸೋಲು.

ಸೀತಾರಾಮರಾಜನನ್ನು ಹಾಗೂ ಆತನ ಹಿಂಬಾಲಕರನ್ನು ಹಿಡಿದು ಕೊಟ್ಟವರಿಗೆ ೧೦,೦೦೦ ರೂಪಾಯಿಗಳು ; ಗಂಟಂದೊರ, ಮಲ್ಲುದೊರ ಮತ್ತು ವೀರಯ್ಯನ ತಲೆಗಳಿಗೆ ತಲಾ ೧,೦೦೦ ರೂಪಾಯಿಗಳು ಮತ್ತು ಇತರ ವೀರರ ತಲೆಗಳಿಗೆ ತಲಾ ೫೦ ರೂಪಾಯಿಗಳು ನೀಡುವುದಾಗಿ ಏಜನ್ಸೀ ಕಮೀಷನರ್ ಜೆ. ಆರ್. ಹಿಗ್ಗಿನ್ಸ್ ಪ್ರಕಟಿಸಿದರು. ರಾಜುವಿಗೆ ಸರ್ಕಾರ ನೀಡಿದ ಅನೇಕ ಗ್ರಾಮಗಳ ಮುಖ್ಯಸ್ಥರನ್ನು ಹಿಡಿದು ೧೯೨೩ರ ಫೆಬ್ರವರಿ ೪ರಂದು ವಿಚಾರಣೆ ನಡೆಸಿದರು. ಕೆಲವು ಕಾಲ ರಾಜುವಿನ ಬಗ್ಗೆ ಯಾವುದೇ ಸಮಾಚಾರವೂ ಇರಲಿಲ್ಲ. ಸೀತಾರಾಮರಾಜು ತಣ್ಣಗಾಗಿ ಹೋದನೆಂದು, ಕ್ರಾಂತಿಕಾರರು ಬೇಸತ್ತರೆಂದು ಅಧಿಕಾರಿಗಳು ನಿರ್ಧರಿಸಿದರು.

೦

ಅಧ್ಯಾಯ ೭

ಅನ್ನವರಂ ಶಂಖವರಂಗಳಲ್ಲಿ ರಾಜು

ಇದ್ದಕ್ಕಿದ್ದಂತೆಯೇ ಕ್ರಾಂತಿಕಾರರು ೧೦-೩-೧೯೨೩ರಂದು ಅನಂತ ಗಿರಿ ಎಂಬ ಪ್ರಾಂತ್ಯವನ್ನು ಲೂಟಿ ಮಾಡಿದರು. ೧೯ರಂದು ಇಬ್ಬರು ಕ್ರಾಂತಿಕಾರಿಗಳು ಬಂಧಿತರಾದರು. ಏಪ್ರಿಲ್ ೧೭ರಂದು ಬೆಳಿಗ್ಗೆ ೫ ಘಂಟೆಯ ಸಮಯದಲ್ಲಿ ರಾಜು ತನ್ನ ದಂಡಿನ ಸಮೇತವಾಗಿ ಅನ್ನವರಂ ಪೋಲೀಸ್ ಠಾಣೆಯಲ್ಲಿ ಹಠಾತ್ತಾಗಿ ಪ್ರತ್ಯಕ್ಷನಾದ. ಅಲ್ಲಿ ಮಲಗಿದ್ದ ೧೦, ೧೫ ಜನ ಪೋಲೀಸರನ್ನು ಮಲ್ಲುದೊರ ಕಾಲಲ್ಲಿ ತುಳಿದು ಎಬ್ಬಿಸಿದನು. ಅವರು ಹೆದರಿದರು. ಹೇಳಿ ಕಳುಹಿಸಿದರೂ ಸಬ್ ಇನ್ಸ್‌ಸ್ಪೆಕ್ಟರ್ ಬರಲಿಲ್ಲ. ಮಲ್ಲುದೊರ ಹೋಗಿ ಕರೆದುಕೊಂಡು ಬಂದನು. ಎಷ್ಟು ಶೋಧಿಸಿದರೂ ಅವರಿಗೆ ಶಸ್ತ್ರಗಳು ಸಿಗಲಿಲ್ಲ.

ಸೀತಾರಾಮರಾಜು ಅನ್ನವರಂ ಸತ್ಯನಾರಾಯಣಸ್ವಾಮಿಯನ್ನು ದರ್ಶಿಸಲು ಬೆಟ್ಟದ ಮೆಟ್ಟಿಲುಗಳನ್ನು ಹತ್ತುತ್ತಿರುವಾಗ ಜನರು ಆತನನ್ನು ಕಂಡು ಪಾದಪೂಜೆ ಮಾಡಿದರು. ಅಲ್ಲಿಗೆ ಬಂದಿದ್ದ ದಂಗೇರು ಗ್ರಾಮವಾಸಿಯಾದ ಚೆರುಕೂರಿ ನರಸಿಂಹಮೂರ್ತಿಯವರು ರಾಜುವಿನೊಂದಿಗೆ ನಡೆಸಿದ ಸಂದರ್ಶನ ೨೧–೪–೧೯೨೩ನೆಯ 'ಆಂಧ್ರ ಪತ್ರಿಕೆ'ಯಲ್ಲಿ ಪ್ರಕಟಿಸಲ್ಪಟ್ಟಿತ್ತು. ಈ ಸಂಭಾಷಣೆ ಅತ್ಯಂತ ಪ್ರಮುಖವಾದದ್ದು.

ರಾಜು ಅನ್ನವರಂನಿಂದ ಶಂಖವರಂ ತಲುಪಿದನು. ಅಲ್ಲಿ ಆತನಿಗೆ ಅಭೂತಪೂರ್ವ ಸ್ವಾಗತ ಸಿಕ್ಕಿತು. ಅಲ್ಲಿಯ ಜನರು ಆತನ ಹೋರಾಟಕ್ಕಾಗಿ ದವಸ, ಧಾನ್ಯ, ಹಣ ಇತ್ಯಾದಿಗಳನ್ನು ಕೊಟ್ಟು ಗೌರವಿಸಿದರು. ಯುದ್ಧದಲ್ಲಿ ಚೆಲ್ಲಾಪಿಲ್ಲಿಯಾಗಿ ಹೋಗಿದ್ದ ಕ್ರಾಂತಿಕಾರರು ಆತನನ್ನು ಭೇಟಿಯಾದರು. ಈ ಎಲ್ಲ ವರದಿಗಳು ಸರ್ಕಾರಕ್ಕೆ ಮುಟ್ಟಿದವು. ಕಲೆಕ್ಟರ್ ಆ ಗ್ರಾಮದ ಮೇಲೆ ೪೦೦೦ ರೂಪಾಯಿಗಳ ಸಾಮೂಹಿಕ ತೆರಿಗೆಯನ್ನು ಹೇರಿದನು. ಈ ಸುದ್ದಿಯನ್ನು ಕೇಳಿ ಸೀತಾರಾಮರಾಜು 'ನಾನು ೬ ಘಂಟೆಯ ಸಮಯದವರೆಗೂ ಶಂಖವರಂನಲ್ಲಿ ಇರುತ್ತೇನೆಂದೂ, ಅಲ್ಲಿಗೆ ಒಂದು ಸಲ ಬಂದು ಭೇಟಿಯಾಗಬೇಕೆಂದು ಕಲೆಕ್ಟರ್‌ಗೆ ಹೇಳಿಕಳುಹಿಸಿದನಾದರೂ ಆತನು ಬರಲಿಲ್ಲ. ಈ ಸುದ್ದಿ ಸಮಾಚಾರವು ೧೯-೪-೧೯೨೩ರ 'ಹಿಂದೂ' ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿತ್ತು. ಈ ಸುದ್ದಿಯನ್ನು ಕೇಳಿ ಸರ್ಕಾರೀ ಅಧಿಕಾರಿಗಳು ಪೆಚ್ಚಾದರು.

ಮೇ ೩೧ರಂದು ಗಂಟಂದೊರನ ನೇತೃತ್ವದಲ್ಲಿ ಕ್ರಾಂತಿಕಾರರು 'ಕೊಯ್ಯೂರು' ತಲುಪಿದರು. ಅಲ್ಲಿ ಅವರು ಸಿ.ಐ.ಡಿ. ಸಬ್ ಇನ್ಸ್‌ಪೆಕ್ಟರನ್ನು, ಗೂಡೆಂ ಡೆಪ್ಯುಟೀ ತಹಸೀಲ್‌ದಾರನನ್ನು ಸೆರೆ ಹಿಡಿದರು. ಅನಂತರ ಅವರುಗಳನ್ನು ಎಚ್ಚರಿಸಿ ಬಿಟ್ಟುಬಿಟ್ಟರು. ಕೊಯ್ಯೂರುನಿಂದ ಹಿಂತಿರುಗುವಾಗ ಅಲ್ಲಿದ್ದ ಅರಣ್ಯ ಇಲಾಖೆಯ ಅಧಿಕಾರಿ ವಸತಿಗೃಹವನ್ನು ಸುಟ್ಟರು. ಹೀಗಿರುವಾಗ ಸಿ. ಯು. ಸ್ವೀನೀ ಏಜನ್ಸೀ ಅಧಿಕಾರಿಯಾಗಿ ನೇಮಕಗೊಂಡನು. ಕ್ರಾಂತಿಕಾರರನ್ನು ಹಿಡಿಯಲು ಸಿದ್ಧನಾದನು. ಕ್ರಾಂತಿಕಾರರು ಜೂನ್ ೧೦ರಂದು 'ಕೊಂಡಕಂಬೇರು'ನ ಮೇಲೆ 'ಮಲ್ಕನಗಿರಿ'ಗೆ ಹೋದರು. ಸೀತಾರಾಮರಾಜು ಅಲ್ಲಿನ ತಾಲ್ಲೂಕು ಕಛೇರಿಯಲ್ಲಿ ಕುಳಿತು ಡೆಪ್ಯುಟೀ ತಹಸೀಲ್‌ದಾರರಿಗೆ ಮತ್ತು ಪೋಲೀಸ್ ಇನ್ಸ್‌ಪೆಕ್ಟರ್‌ಗೆ ಹೇಳಿಕಳುಹಿಸಿದನು. ಅವರುಗಳು ಬಂದನಂತರ ತನ್ನ ಮುಂದಿನ ಯೋಜನೆಗಳನ್ನು ಧೈರ್ಯವಾಗಿ ತಿಳಿಸಿದನು. ಮುಹೂರ್ತವನ್ನಿಟ್ಟು ಜೂನ್ ೧೩ರಂದು ಸರ್ಕಾರೀ ಸೈನ್ಯ

ದೊಂದಿಗೆ ತಾನು ಹೋರಾಡುವೆನೆಂದು, ಪಂಜಾಬ್‌ನಿಂದ ತನಗೆ ಸಹಾಯವು ಸಿಗುವುದೆಂದು, ರಾಜಮಂಡ್ರಿ ಮುಂತಾದ ಪ್ರದೇಶಗಳಿಗೆ ಹೋಗಿ ಅಲ್ಲಿ ಇನ್ನೂ ಕೆಲವು ಜನ ಕ್ರಾಂತಿಕಾರರನ್ನು ಸೇರಿಸಿ ತನ್ನ ಧ್ಯೇಯವಾದ ಸ್ವಾತಂತ್ರ್ಯವನ್ನು ಸಂಪಾದಿಸುವವರೆಗೂ ಸರ್ಕಾರ ದೊಂದಿಗೆ ಹೋರಾಟವನ್ನು ಸಾಗಿಸುವೆನೆಂದೂ ಅವರಿಗೆ ಹೇಳಿದನು.

ಜೂನ್ ೧೭ರಂದು ಸೀತಾರಾಮರಾಜು ೬೦ ಜನ ಕ್ರಾಂತಿಕಾರ ರೊಂದಿಗೆ, ೩೦ ಬಂದೂಕುಗಳೊಂದಿಗೆ ಬಂದು ಗೂಡೆಂನಲ್ಲಿ ವಾಸ ಮಾಡುತ್ತಿರುವನೆಂದು ಒಬ್ಬ ಅಧ್ಯಾಪಕನು ಸ್ವೀನೀಗೆ ಸುದ್ದಿ ತಿಳಿಸಿದ ನಾದರೂ, ಆತನನ್ನು ಹಿಡಿಯಲು ಸರ್ಕಾರೀ ಸೈನಿಕರು ಧೈರ್ಯ ಮಾಡಲಿಲ್ಲ.

ಹೀಗೆ ಕ್ರಾಂತಿಕಾರರ ಕಾರ್ಯಕಲಾಪಗಳು ಒಂದಲ್ಲ ಒಂದು ದಿನ ನಡೆಯುತ್ತಲೇ ಇದ್ದವು. ಈ ಸಮಯದಲ್ಲೇ 'ಅಗ್ಗಿರಾಜು' ಕ್ರಾಂತಿ ದಳವನ್ನು ಸೇರಿದ. ಗುಡಾರಗಳನ್ನು ಬೆಂಕಿಯಿಟ್ಟು ಭಸ್ಮೀ ಪಟಲ ಮಾಡುವುದರಲ್ಲಿ ಈತನು ಎತ್ತಿದ ಕೈಯಾದ್ದರಿಂದ ಈತನಿಗೆ ಅಗ್ಗಿರಾಜು (ಬೆಂಕಿರಾಜ) ಎಂಬ ಸಾರ್ಥಕ ನಾಮ ಬಂದಿತ್ತು.

ಮಲ್ಲುದೊರ ಸೀತಾರಾಮರಾಜನಿಗೆ ಬಲಭುಜ. ಈತನಿಗೆ ಕುಡುಕುತನ, ವ್ಯಭಿಚಾರದ ದುರಭ್ಯಾಸಗಳಿದ್ದವು. ಈ ದುರಭ್ಯಾಸ ಗಳನ್ನು ಬಿಡಬೇಕೆಂದು ರಾಜು ಕೇಳಿಕೊಂಡನಾದರೂ, ಆತನ ವರ್ತನೆ ಯಲ್ಲಿ ಬದಲಾವಣೆ ಕಾಣದೇ ಇರುವುದರಿಂದ 'ಶಸ್ತ್ರಗಳನ್ನು ವಿಸರ್ಜಿಸಿ ಕ್ರಾಂತಿದಳವನ್ನು ಬಿಟ್ಟು ಹೋಗು' ಎಂದು ಆಜ್ಞೆ ಮಾಡಿದನು. ರಾಜುವಿನ ಆಜ್ಞೆಯನ್ನು ಶಿರಸಾವಹಿಸಿ ಮಲ್ಲುದೊರ 'ನಡಿಂಪಾಲೆಂ' ನಲ್ಲಿದ್ದ ತನ್ನ ಪ್ರೇಯಸಿಯ ಮನೆಯಲ್ಲಿದ್ದಾಗ ೧೭–೯–೧೯೨೩ರಂದು ರಾತ್ರಿ ೧೧ ಘಂಟೆಯ ಸಮಯದಲ್ಲಿ ಸರ್ಕಾರೀ ಸೈನಿಕರು ಈತನನ್ನು ಬಂಧಿಸಿದರು. ಆತನನ್ನು ವಿಶಾಖಪಟ್ಟಣಂ ಜೈಲಿನಲ್ಲಿಟ್ಟು ಹಿಂಸಿಸಿ ಕ್ರಾಂತಿ ರಹಸ್ಯಗಳನ್ನು ತಿಳಿದುಕೊಳ್ಳಲು ವಿಶ್ವ ಪ್ರಯತ್ನ ಮಾಡಿದರೂ

ಸಹ ಅದು ಪ್ರಯೋಜನವಾಗಲಿಲ್ಲ. ಆತನ ಮೇಲೆ ಮೊಕದ್ದಮೆ ಹೂಡಿದರು. ೧೨-೫-೧೯೨೪ರಂದು ಆತನಿಗೆ ಕಠಿಣ ಶಿಕ್ಷೆ ವಿಧಿಸಿದರು. ಕೋರ್ಟ್‌ನಲ್ಲಿ ಅಪೀಲ್ ಮಾಡಿಕೊಳ್ಳಲು, ಮೊದಲಿನ ಶಿಕ್ಷೆಯನ್ನು ದ್ವೀಪಾಂತರವಾಸ ಶಿಕ್ಷೆಯನ್ನಾಗಿ ಬದಲಾಯಿಸಿ ಆತನನ್ನು ಅಂಡಮಾನ್ ದ್ವೀಪಕ್ಕೆ ಕಳುಹಿಸಿದರು. ೧೩ವರೆ ವರ್ಷಗಳಕಾಲ ಆತನು ಶಿಕ್ಷೆಯನ್ನು ಅನುಭವಿಸಿದನು. ನಂತರ ೧೯೩೭ರಲ್ಲಿ ಆತನು ವಿಮುಕ್ತನಾದನು. ಭಾರತದೇಶಕ್ಕೆ ಸ್ವಾತಂತ್ರ್ಯ ಬಂದನಂತರ ೧೯೫೨ರಲ್ಲಿ ಮಲ್ಲುದೊರ ಲೋಕ ಸಭಾಸದಸ್ಯನಾದನು. ೧೯೬೯ರಲ್ಲಿ ಆತನು ಅಸುನೀಗಿದನು.

ಕ್ರಾಂತಿಕಾರರು ಸೆಪ್ಟೆಂಬರ್ ೨೨ರಂದು ಪಾಡೇರು ಪೊಲೀಸ್ ಠಾಣೆಯ ಮೇಲೆ ದಾಳಿ ನಡೆಸಿದರು. ನಂತರ ಸೆಪ್ಟೆಂಬರ್ ೩೦ರಂದು ಒಂದು ಪೊಲೀಸ್ ದಳವು ಕ್ರಾಂತಿಕಾರರ ಮೇಲೆ ಗುಂಡು ಹಾರಿಸಿದಾಗ ಇಬ್ಬರು ಕ್ರಾಂತಿಕಾರರು ಅಸುನೀಗಿದರು. ಅಕ್ಟೋಬರ್ ೨೬ರಂದು ಕ್ರಾಂತಿದಳವು ಗೂಡೆಂ ಸೈನಿಕ ಸ್ಥಾವರದ ಮೇಲೆ ದಾಳಿ ನಡೆಸಿದರು. ಯೋಜಿಸಿದ ಪ್ರಕಾರ ಸೀತಾರಾಮರಾಜು ಈ ದಾಳಿಯನ್ನು ನಡೆಸಿದ್ದು.

ಹ್ಯೂಂ ಎಂಬಾತನು ಕೆಲವು ಸಿಬ್ಬಂದಿಯೊಂದಿಗೆ ನವೆಂಬರ್ ೧ ರಂದು ಕ್ರಾಂತಿಕಾರರನ್ನು ಹಿಡಿಯಲು ಯತ್ನಿಸಿದನು. ಗುಂಡು ಹಾರಿಸಿ ಸಿದಾಗ ಒಬ್ಬ ಕ್ರಾಂತಿಕಾರನು ಅಸುನೀಗಿದನು. ಕೆಲವರು ಗಾಯ ಗೊಂಡರು. ಮತ್ತೆ ನವೆಂಬರ್ ೫ರಂದು ಹ್ಯೂಂ ದಳವು ಕ್ರಾಂತಿ ಕಾರರ ಮೇಲೆ ಗುಂಡು ಹಾರಿಸಿದಾಗ ಇಬ್ಬರು ಸತ್ತರು. ಸರ್ಕಾರೀ ಅಧಿಕಾರಿಗಳು ಕೊಡುವ ಹಿಂಸೆಗಳನ್ನು ಸಹಿಸದೇ ಆಯಾ ಪ್ರದೇಶದ ಜನರು ಕ್ರಾಂತಿದಳದಲ್ಲಿ ಸೇರುತ್ತಲೇ ಇರುತ್ತಿದ್ದರು. ಆದ್ದರಿಂದ ಈ ಕ್ರಾಂತಿಯನ್ನು ಅಡಗಿಸುವುದು ಸರ್ಕಾರಕ್ಕೆ ಅತಿ ಕ್ಲಿಷ್ಟದ ಸಮಸ್ಯೆ ಯಾಯಿತು. ಈ ಕ್ರಾಂತಿಯನ್ನು ಅಡಗಿಸಲು ಸುಶಿಕ್ಷಿತವಾದ ಸೈನಿಕ ರಿಲ್ಲದೇ ಇದ್ದರಿಂದ ಅಸ್ಸಾಮ್ ರೈಫಿಲ್ ದಳವನ್ನು ಕರೆಸಿಕೊಂಡರು. ಕ್ರಾಂತಿಯನ್ನು ಅಡಗಿಸುವುವರಲ್ಲಿ ಹೆಸರಾಂತ ಟಿ. ಜಿ. ರೂಥರ್‌ಫರ್ಡ್

೧೭-೪-೧೯೨೪ರಲ್ಲಿ ಮನ್ಯ ಪ್ರದೇಶಕ್ಕೆ ಸ್ಪೆಶಲ್ ಕಮೀಷನರ್ ಆಗಿ ನೇಮಕಗೊಂಡನು.

ಕ್ರಾಂತಿಕಾರರಲ್ಲಿ ಅತಿ ಸಾಹಸಿಯೆನ್ನಿಸಿಕೊಂಡವನು ಅಗ್ಗಿರಾಜು. ಸಶಸ್ತ್ರಗಳಿಂದ ಕಾವಲು ಕಾಯುತ್ತಿದ್ದ ಪೊಲೀಸರ ಮೇಲೆ ಗುಂಡು ಹಾರಿಸಿ, ಸರ್ಕಾರೀ ಸೈನಿಕರಿಗಾಗಿ ಕೊಂಡೊಯ್ಯುತ್ತಿದ್ದ ಆಹಾರ ಪದಾರ್ಥಗಳನ್ನು ತಮ್ಮ ಕ್ರಾಂತಿ ಶಿಬಿರಗಳಿಗೆ ಕಳುಹಿಸುತ್ತಿದ್ದನು. ೬-೫-೧೯೨೪ರಂದು ಇನ್ಸ್‌ಪೆಕ್ಟರ್ ಉಪೇಂದ್ರನಾಯಕ್ ಮಲಬಾರ್ ಪೋಲೀಸರೊಂದಿಗೆ ಕ್ರಾಂತಿಕಾರರನ್ನು ಹುಡುಕಲು ಆರಂಭಿಸಿದನು. 'ಕಿರ್ರಬು' ಗ್ರಾಮದ ಹತ್ತಿರ ಸೀತಾರಾಮರಾಜು ಮತ್ತು ಅವರ 50 ಜನ ಅನುಚರರು ಕಾಣಿಸಿದರು. ಎರಡು ಪಕ್ಷಗಳು ಗುಂಡುಗಳನ್ನು ಹಾರಿಸಿದರು. ಅಗ್ಗಿರಾಜು ತನ್ನ ಹತ್ತಿರವಿದ್ದ ೩೦೩ ಬಂದೂಕಿನೊಂದಿಗೆ ಗುಂಡು ಹಾರಿಸಿದನು. ಆತನ ಹತ್ತಿರವಿದ್ದ ಗುಂಡುಗಳೆಲ್ಲವೂ ಮುಗಿಯುತ್ತ ಬಂದವು. ಗುಂಡು ಹಾರಿಸುತ್ತಾ ಹಿಂತಿರುಗಿ ಓಡುವಾಗ ಶತ್ರು ಸೈನಿಕರ ಗುಂಡೇಟು ಅಗ್ಗಿರಾಜನ ಕಾಲ ಮೇಲೆ ಬಿದ್ದಿತು. ಆ ಬಲವಾದ ಗಾಯದೊಂದಿಗೆ ತೆವಳುತ್ತಾ ಬಾವಿಯಲ್ಲಿ ಬಿದ್ದು ಅಸು ನೀಗಬೇಕೆಂದು, ಪ್ರಾಣದೊಂದಿಗೆ ಶತ್ರುಗಳ ಕೈಗೆ ಸಿಕ್ಕಬಾರದೆಂಬುದು ಆತನ ಆಶಯವಾಗಿತ್ತು. ಅಷ್ಟರಲ್ಲಿಯೇ ಸೈನಿಕರು ಆತನನ್ನು ಹಿಡಿದು ಅಂಡಮಾನ್‌ಗೆ ಕಳುಹಿಸಿದರು. ನಂತರ ಆತನು ಅಲ್ಲಿಯೇ ಅಸು ನೀಗಿದನು.

ಅಧ್ಯಾಯ ೮

ಸೀತಾರಾಮರಾಜುವಿನ ನಿಧನ

ಎರಡು ವರ್ಷಗಳ ಕಾಲ ಮನ್ಯಂ ಪ್ರದೇಶದಲ್ಲಿ ನಡೆದ ಈ ಹೋರಾಟದಲ್ಲಿ ಎರಡು ಪಕ್ಷಗಳಲ್ಲಿಯೂ ಹಲವಾರು ಅಮಾಯಕ ಜನರು ಆಹುತಿಯಾದರು. ರಾಜುವಿನ ಕ್ರಾಂತಿಗೆ ಸಹಕಾರ ನೀಡಿದ ಜನರನ್ನು ಸರ್ಕಾರೀ ಅಧಿಕಾರಿಗಳು ಅತಿಕ್ರೂರವಾಗಿ ಹಿಂಸಿಸಿದರು. ಹಲವಾರು ಜನರ ಮೇಲೆ ಮೊಕದ್ದಮೆಗಳು ಹೂಡಲ್ಪಟ್ಟವು. ಹಲವಾರು ಗ್ರಾಮಗಳ ಮೇಲೆ ತೆರಿಗೆ ಹೇರಿದನು. ತನ್ನಿಂದ ಜನರು ಇಂತಹ ಬಾಧೆಗಳಿಗೆ ಒಳಪಡುದತ್ತಿದ್ದಾರೆಂದು ಸೀತಾರಾಮರಾಜು ದುಃಖಿಸಿದನು. ಇಂತಹ ಕ್ಲಿಷ್ಟ ಸ್ಥಿತಿಯಲ್ಲಿ ಇನ್ನೂ ಕ್ರಾಂತಿಯನ್ನು ಮುಂದುವರೆಸಿದರೆ ಜನರ ಕಷ್ಟಗಳು ಹೆಚ್ಚಾಗಬಹುದೆಂದು ಭಾವಿಸಿದನು. ಕ್ರಾಂತಿಯಿಂದ ಜನರ ಜೀವನ ಅಸ್ತವ್ಯಸ್ತವಾಗಬಾರದೆಂಬುದು ಈತನ ಆಶಯ. ಜನರ ಬಾಧೆಗಳನ್ನು ತೊಲಗಿಸಲು ಆತ್ಮತ್ಯಾಗ ಬಿಟ್ಟು ಬೇರೊಂದು ದಾರಿಯಿಲ್ಲ ಎಂದು ನಿಶ್ಚಯಿಸಿಕೊಂಡನು. 'ಒಂದು ವಾರದೊಳಗೆ ಕ್ರಾಂತಿಕಾರರ ಸುಳಿವುಕೊಡದೆ ಇದ್ದ ಪಕ್ಷದಲ್ಲಿ ಜನರನ್ನು ಗುಂಡು ಹಾರಿಸಿ ಸಾಯಿಸುತ್ತೇವೆ' ಎಂದು ರೂಥರ್‌ಫರ್ಡ್ ಕೃಷ್ಣಾದೇವಿ ಪೇಟೆಯ ಸಭೆಯಲ್ಲಿ ಪ್ರಕಟಿಸಿದನು. ಆ ಸಭೆಯ ವಿವರಗಳನ್ನು ತಿಳಿದುಕೊಳ್ಳಲು ಸೀತಾರಾಮರಾಜು 'ಮಂಪ' ಗ್ರಾಮಕ್ಕೆ ಹೊರಟನು.

ಅಲ್ಲಿ ಮಂಪ ಮುನ್ಸೀಫರು ಕೊಟ್ಟ ಹಾಲು, ಹಂಪಲುಗಳನ್ನು ರಾಜು ಸ್ವೀಕರಿಸದೇ ತನ್ನನ್ನು ಆಂಗ್ಲ ಸೈನಿಕರಿಗೆ ಹಿಡಿದುಕೊಟ್ಟಲ್ಲಿ ಸರ್ಕಾರ ದವರು ಹತ್ತು ಸಾವಿರ ರೂಪಾಯಿ ಕೊಡುವರೆಂದು ಆತನಿಗೆ ಹೇಳಿ ದನು. ಆದರೂ ಅಂತಹ ನೀಚಕಾರ್ಯ ಮಾಡಲು ಆತನು ಒಪಲಿಲ್ಲ.

ಸೀತಾರಾಮರಾಜು ಮೇ ೭ರಂದು ಕೊಯ್ಯೂರು ಗ್ರಾಮದ ಸಮೀಪದಲ್ಲಿದ್ದ ಏರಿನ ದಡದಲ್ಲಿ ಸ್ನಾನ ಮಾಡುತ್ತ ತಾನಲ್ಲಿದ್ದ ಸುದ್ದಿ ಯನ್ನು ಒಬ್ಬ ಕೋಮು ಬಾಲಕನೊಂದಿಗೆ ಆಂಗ್ಲ ಸೈನಿಕ ಶಿಬಿರಕ್ಕೆ ತಿಳಿಸಿ ಸಿದನು. ಅವನು ಏನೂ ಯೋಚನೆ ಮಾಡದೆ ಆಂಗ್ಲ ಸೈನಿಕರಿಗೆ ತಿಳಿಸಿದಕೂಡಲೇ ಸರ್ಕಾರೀ ಅಧಿಕಾರಿಯಾದ ಆಳ್ವಾರುನಾಯ್ಡು ೨೫ ಜನ ಮಲಬಾರ್ ಪೊಲೀಸರನ್ನು ಕರೆದುಕೊಂಡು ಅಲ್ಲಿಗೆ ಹೋದನು. ಮೊದಲು ಆತನನ್ನು ಹಿಡಿಯಲು ಹಿಂಜರಿದರೂ, ಹಿಂಜರಿಯಬೇಡಿ ರೆಂದು ಸೀತಾರಾಮರಾಜು ಆಶ್ವಾಸನೆ ಕೊಟ್ಟನಂತರ ಅವರು ಆತನನ್ನು ಸೆರೆ ಹಿಡಿದರು. ಬಾಧೆಗಳಿಂದ ನಲುಗುತ್ತಿದ್ದ ಜನರನ್ನು ಮುಕ್ತಿಗೊಳಿ ಸಲು ಸೀತಾರಾಮರಾಜು ತಾನಾಗಿಯೇ ಸರ್ಕಾರಕ್ಕೆ ಸಿಕ್ಕಿಬಿದ್ದನು. ಕೊಯ್ಯೂರು ಹತ್ತಿರವಿದ್ದ 'ರಾಜೇಂದ್ರ ಪಾಲೆಂ'ನಲ್ಲಿ ಸೀತಾರಾಮ ರಾಜುನನ್ನು ಮರಕ್ಕೆ ಕಟ್ಟಿಹಾಕಿ ಮೇಜರ್ ಗುಡಾಲ್ ಎಂಬುವನು ರಿವಾಲ್ವರ್‌ನಿಂದ ಗುಂಡು ಹಾರಿಸಿ ಸಾಯಿಸಿದನು. ೮-೫-೧೯೨೪ರಲ್ಲಿ ರಾಜುವಿನ ಮೃತ ಕಳೇಬರವನ್ನು ಕೃಷ್ಣಾದೇವಿ ಪೇಟೆಗೆ ತೆಗೆದುಕೊಂಡು ಹೋಗಿ ಫೋಟೋ ತೆಗೆಸಿದ ನಂತರ ದಹನ ಮಾಡಿದರು. ಚಿತಾಭಸ್ಮ ವನ್ನು ಸಮೀಪದಲ್ಲಿದ್ದ ವರಾಹ ನದಿಯಲ್ಲಿ ಬೆರೆಸಿ ತಮ್ಮ ಛಲವನ್ನು ತೀರಿಸಿಕೊಂಡರು. ಹೀಗೆ ಭಾರತದೇಶ ಚರಿತ್ರೆಯಲ್ಲಿ ಛತ್ರಪತಿ ಶಿವಾಜಿಗೆ ಸಮಾನನಾದ ಈ ಕ್ರಾಂತಿಕಾರ ಸೂರ್ಯನು ತನ್ನ ೨೭ನೆಯ ವರ್ಷ ದಲ್ಲಿಯೇ ಅಸ್ತಂಗತನಾದನು. ಈ ಸುದ್ದಿಯನ್ನು ಕೇಳಿದ ಜನರು ಕಂಬನಿಗೈದರು. ಚಿಕ್ಕಪ್ಪ ರಾಮಕೃಷ್ಣಂರಾಜು, ತಾಯಿ ಸೂರ್ಯ ನಾರಾಯಣಮ್ಮರವರುಗಳು ದುಃಖ ಸಮುದ್ರದಲ್ಲಿ ಮುಳುಗಿದರು.

ಶ್ರೀನಿವಾಸಯ್ಯನವರ ಗ್ರಂಥ ಭಂಡಾರ
ACC. No.: CC5445
No.: 5449
DATE:
ಭವನ ಬೆಂಗಳೂರು - 1

ಆಕರ ಗ್ರಂಥಗಳು

ತೆಲುಗು

೧. ಶ್ರೀ ಅಲ್ಲೂರಿ ಸೀತಾರಾಮರಾಜು ಚರಿತ್ರ
(೧೯೨೨-೨೪ ರಾಜು ವಿಪ್ಲವಂ)
ಶ್ರೀ ಯರ್ರಮಿಲ್ಲಿ ನರಸಿಂಹಾರಾವು

೨. ಅಲ್ಲೂರಿ ಸೀತಾರಾಮರಾಜು
—ಆಚಾರ್ಯ ಕೆ. ವೆಂಕಟರಾಮರಾಜು

೩. ಅಲ್ಲೂರಿ ಸೀತಾರಾಮರಾಜು
—ಪಡಾಲ ರಾಮಾರಾವು

೪. ವಿಪ್ಲವ ವೀರುಡು ಅಲ್ಲೂರಿ ಸೀತಾರಾಮರಾಜು
—ಜೋಲೆಪಾಲೆಂ ಮಂಗಮ್ಮ

೫. ವಿಜ್ಞಾನ ಸರ್ವಸ್ವಮು— ಎರಡನೆಯ ಸಂಪುಟ.
—(ತೆಲುಗು ಸಂಸ್ಕೃತಿ–೨)

ಸಾಮಾಜಿಕ ಚಿಂತನ ಮಾಲೆ